ಸಂಪುಟ 01 | ಸಂಚಿಕೆ 138 | ಶುಕ್ರವಾರ 24 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ಸ್ವಯಂ-ಆರೈಕೆ ದಿನ (International Self-Care Day)

ಪ್ರತಿವರ್ಷ ಜುಲೈ 24 (24/7) ರಂದು ಆಚರಿಸಲಾಗುತ್ತದೆ. ದಿನದ 24 ಗಂಟೆಗಳೂ, ವಾರದ 7 ದಿನಗಳೂ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಮಹತ್ವವನ್ನು ಈ ದಿನ ಸಾರುತ್ತದೆ.

2) ಕಜಿನ್ಸ್ ಡೇ (Cousins Day)

ಕೆಲವು ದೇಶಗಳಲ್ಲಿ ಸೋದರ-ಸೋದರಿಯ ಮಕ್ಕಳ (ಕಜಿನ್ಸ್) ನಡುವಿನ ಬಾಂಧವ್ಯವನ್ನು ಆಚರಿಸುವ ದಿನ.

## ಸುಭಾಷಿತ

ನನ್ನಿಂದ ಇದು ಸಾಧ್ಯವಿಲ್ಲ ಎಂದುಕೊಳ್ಳಬೇಡಿ. ನಾನಿದನ್ನು ಮಾಡಬಲ್ಲೆ ಎಂಬ ಆತ್ಮವಿಶ್ವಾಸವೇ ನಿಮ್ಮನ್ನು ಮುನ್ನಡೆಸಬಲ್ಲದು.

-ಸ್ವಾಮಿ ವಿವೇಕಾನಂದ

# ಮತ್ತೆರಡು ಡಿಸಿಎಂ ಹುದ್ದೆ ಸೃಷ್ಟಿ ಸಾಧ್ಯತೆ..?

❑ ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆ ವಿಳಂಬವಾಗುತ್ತಿರುವ ನಡುವೆಯೇ ಎರಡು ಹೆಚ್ಚುವರಿ ಉಪ ಮುಖ್ಯಮಂತ್ರಿಗಳ ಹುದ್ದೆ ಹಾಗೂ ವಿಧಾನಸಭಾಧ್ಯಕ್ಷರ ಆಯ್ಕೆ ಬಗ್ಗೆ ಕೂಡ ಚರ್ಚೆಗಳು ಶುರುವಾಗಿವೆ.**



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಮೊದಲ ಬಾರಿ ಸಂಪುಟ ವಿಸ್ತರಣೆ ಕುರಿತು ದೆಹಲಿಗೆ ಭೇಟಿ ನೀಡಿದ ವೇಳೆಯಲ್ಲೇ ನೂತನ ಸಚಿವರ ಆಯ್ಕೆ ಹಾಗೂ ವಿಧಾನಸಭಾಧ್ಯಕ್ಷರ ಕುರಿತು ಚರ್ಚಿಸಲಾಗಿತ್ತು ಎಂದು ಹೇಳಲಾಗಿದೆ.

ಕಾಂಗ್ರೆಸ್‌ನಲ್ಲಿ ಅತ್ಯಂತ ಹಿರಿಯ ಶಾಸಕರಾಗಿರುವ ಆರ್.ವಿ.ದೇಶಪಾಂಡೆ ಅವರನ್ನು ವಿಧಾನ ಸಭಾಧ್ಯಕ್ಷರನ್ನಾಗಲು ಮನವಿ ಮಾಡಲಾಗಿತ್ತು. ಆದರೆ 9 ಬಾರಿ ಗೆಲುವು ಕಂಡಿರುವ ತಾವು ಈ ಬಾರಿ ಸಚಿವರಾಗಲೇ ಬೇಕೆಂದು ದೇಶಪಾಂಡೆ ಪಟ್ಟು ಹಿಡಿದಿದ್ದಾರೆ. ಜೊತೆಗೆ ವಿಧಾನ ಸಭಾಧ್ಯಕ್ಷರಾಗಲು ನಿರಾಕರಿಸಿದ್ದಾರೆ. ಅವರ ಬಳಿಕ ದಿನೇಶ್ ಗುಂಡೂರಾವ್ ಅವರ ಹೆಸರನ್ನು ವಿಧಾನ ಸಭಾಧ್ಯಕ್ಷ ಸ್ಥಾನಕ್ಕೆ ಪ್ರಸ್ತಾಪಿಸಲಾಗಿದೆ. ಇದು ಚರ್ಚೆಯ ಹಂತದಲ್ಲಿದೆ. ದಿನೇಶ್ ಗುಂಡೂರಾವ್ ಕೂಡ ವಿಧಾನ ಸಭಾಧ್ಯಕ್ಷರಾಗಲು ಒಲ್ಲೆ ಎನ್ನುತ್ತಿದ್ದಾರೆ ಎಂಬ ಅಭಿಪ್ರಾಯಗಳಿವೆ. ಉಳಿದಂತೆ ಹಿರಿಯರಾದ ಎಚ್.ಕೆ.ಪಾಟೀಲ್ ಅವರನ್ನು ಒಪ್ಪಿಸಲು ಕಾಂಗ್ರೆಸ್ ನಾಯಕರು ಕಸರತ್ತು ನಡೆಸುತ್ತಿದ್ದಾರೆ. ಯಲಬುರ್ಗದ ಶಾಸಕ ಬಸವರಾಜ ರಾಯರೆಡ್ಡಿ, ಶಿರಾ ಕ್ಷೇತ್ರದ ಟಿ.ಬಿ.ಜಯಚಂದ್ರ, ಮಧುಗಿರಿ ಕ್ಷೇತ್ರದ ಕೆ.ಎನ್.ರಾಜಣ್ಣ, ನರಸಿಂಹರಾಜ ಕ್ಷೇತ್ರದ ತನ್ವೀರ್ ಸೇಠ್ ಅವರ ಹೆಸರುಗಳ ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ಚರ್ಚೆಯಲ್ಲಿವೆ.

ಬಹುತೇಕ ಎಚ್.ಕೆ.ಪಾಟೀಲ್ ಅವರನ್ನು ಒಪ್ಪಿಸುವ ನಿಟ್ಟಿನಲ್ಲಿ ವ್ಯಾಪಕ ಚರ್ಚೆಗಳು ನಡೆಯುತ್ತಿವೆ. ಈ ನಡುವೆ ವಿಧಾನಸಭೆಯ ಸರ್ಕಾರದ ಮುಖ್ಯ ಸಚೇತಕರ ಹುದ್ದೆಗೆ ವಿಜಯಾನಂದ ಕಾಶಪ್ಪನವರ್, ಎನ್.ಎಚ್.ಕೋನರೆಡ್ಡಿ, ಪ್ರಕಾಶ್ ಕೋಳಿವಾಡ, ಎನ್.ಟಿ.ಶ್ರೀನಿವಾಸ್, ಬಸವರಾಜ್ ಶಿವಗಂಗ, ಎಚ್.ಡಿ.ರಂಗನಾಥ್, ರಿಜ್ವಾನ್ ಅರ್ಷದ್‌ಅವರ ಹೆಸರುಗಳು ಚರ್ಚೆಯಲ್ಲಿವೆ.

ಸಂಪುಟ ವಿಸ್ತರಣೆಗೆ ಎರಡು, ಮೂರು ಬಾರಿ ಮುಹೂರ್ತ ಮುಂದೂಡಿಕೆಯಾಗಿದೆ. ಬಹುತೇಕ ವಾರಾಂತ್ಯದಲ್ಲಿ ಹೈಕಮಾಂಡ್ ನಾಯಕರು ಬುಲಾವ್ ನೀಡಬಹುದು, ದೆಹಲಿಯಲ್ಲಿ ನಡೆಯುವ ಚರ್ಚೆಯ ವೇಳೆ ಸಚಿವರ ಜೊತೆಗೆ ವಿಧಾನಸಭಾಧ್ಯಕ್ಷರ ನೇಮಕಾತಿಯೂ ಆಖೈರುಗೊಳ್ಳುವ ಸಾಧ್ಯತೆ ಇದೆ. ಹಿಂದಿನ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ತಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಈಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿದ್ದಾರೆ. ಅವರಿಂದ ತೆರವಾಗಿದ್ದ ಸ್ಥಾನ ಖಾಲಿಯಿದೆ. ವಿಧಾನಸಭೆಯ ಉಪಾಧ್ಯಕ್ಷರಾಗಿರುವ ರುದ್ರಪ್ಪ ಲಮಾಣಿ ಹಂಗಾಮಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ.

ಈ ನಡುವೆ ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿ ಕುರಿತು ವ್ಯಾಪಕ ಚರ್ಚೆಗಳಾಗುತ್ತಿವೆ. ಪರಿಶಿಷ್ಟ ಪಂಗಡದಿಂದ ಸತೀಶ್ ಜಾರಕಿಹೊಳಿ, ಲಿಂಗಾಯತ ಸಮುದಾಯದಿಂದ ಎಂ.ಬಿ.ಪಾಟೀಲ್ ಮತ್ತು ಈಶ್ವರ್ ಖಂಡ್ರೆ ಪ್ರಬಲ ರೇಸ್‌ನಲ್ಲಿದ್ದಾರೆ.

## ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ ಬಸವರಾಜು ಪಡುಕೋಟೆ ಮೇಲೆ ಗೂಂಡಾ ಕಾಯ್ದೆ

❑ ನೈಜ್ಯ ದೇಸೆ ನ್ಯೂಸ್

**ಬೆಂಗಳೂರು; ಜಿಬಿಎ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿ ದಬ್ಬಾಳಿಕೆ ನಡೆಸಿದ್ದ ಪ್ರಮುಖ ಆರೋಪಿ ಬಸವರಾಜ ಪಡುಕೋಟೆ ವಿರುದ್ಧ ಗೂಂಡಾ ಕಾಯ್ದೆ ದಾಖಲಿಸಲು ಪೊಲೀಸರು ಚಿಂತನೆ ನಡೆಸಿದ್ದಾರೆ. ಈಗಾಗಲೇ ಹಲವಾರು ಠಾಣೆಗಳಲ್ಲಿ 19ಕ್ಕೂ ಹೆಚ್ಚು ಪ್ರಕರಣಗಳು ಈತನ ಮೇಲಿದ್ದು, ಹಫ್ತಾ ವಸೂಲಿ ಸೇರಿದಂತೆ ಹಲವು ಅಪರಾಧಿ ಚಟುವಟಿಕೆಗಳು ಮಿತಿಮೀರಿರುವ ಹಿನ್ನೆಲೆಯಲ್ಲಿ ಕಠಿಣ ಕಾನೂನಿನಡಿ ಪ್ರಕರಣ ದಾಖಲಿಸಲು ಪೊಲೀಸರು ಮುಂದಾಗಿದ್ದಾರೆ.**



ಈಗಾಗಲೇ ಅಧಿಕಾರಿಗಳ ಮೇಲಿನ ಹಲ್ಲೆಗೆ ಸಂಬಂಧಿಸಿದಂತೆ 12 ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.ಇದರಲ್ಲಿ ಬಸವರಾಜು ಪಡುಕೋಟೆ, ರಘು, ಬಸವರಾಜ್, ಪಾರ್ಥಿಬನ್ ಹಾಗೂ ಪರಶುರಾಮ್ ಅವರನ್ನು 4 ದಿನಗಳ ಮಟ್ಟಿಗೆ ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ. ಉಳಿದ 7 ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಿ ಪುಡಿ ರೌಡಿಗಳಿಗೆ ಬುದ್ಧಿ ಕಲಿಸಲು ಮುಂದಾಗಿದ್ದಾರೆ.ಸಚಿವ ಕೃಷ್ಣಭೈರೇಗೌಡ ಹಾಗೂ ಜಿಬಿಎ ನೌಕರರ ಸಂಘ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿರುವ ಹಿನ್ನೆಲೆಯಲ್ಲಿ ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸುತ್ತಿದ್ದಾರೆ.

## ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯಕ್ರಮದ ಅಂಗವಾಗಿ ಜಾಗೃತಿ ಜಾಥ

❑ ನೈಜ್ಯ ದೇಸೆ ನ್ಯೂಸ್

**ಮಾನ್ವಿ : ಪಟ್ಟಣದ ಶ್ರೀ ವೆಂಕಟೇಶ್ವರ ಪದವಿ ಮಹಾವಿದ್ಯಾಲಯದ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯಕ್ರಮದ ಅಂಗವಾಗಿ ಕಾಲೇಜಿನ ವಿದ್ಯಾರ್ಥಿಗಳಿಂದ ನಡೆದ ಸಾರ್ವಜನಿಕರಿಗೆ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಕಾಲೇಜಿನ ಪ್ರಾಂಶುಪಾಲರಾದ ಆಂಜನೇಯ ನಸಲಾಪುರ ಚಾಲನೆ ನೀಡಿ ಮಾತನಾಡಿ ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಅರ್ಹ ನಾಗರಿಕನೂ ಕೂಡ ಮತದಾನದ ಹಕ್ಕನ್ನು ಹೊಂದುವುದು ಅಗತ್ಯ.**




ಸಂವಿಧಾನದಲ್ಲಿ ದೇಶದಲ್ಲಿನ ಪ್ರತಿಯೊಬ್ಬ 18 ವರ್ಷ ತುಂಬಿದ ಯುವಕ,ಯುವತಿಯರಿಗೆ ಮತದಾನದ ಹಕ್ಕನ್ನು ನೀಡಿರುವುದರಿಂದ 18 ವರ್ಷ ತುಂಬಿದವರು ನಮೂನೆ 6 ರಲ್ಲಿ ಅರ್ಜಿಯನ್ನು ನೀಡಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವುದರ ಜೊತೆಗೆ ತಮ್ಮ ಕುಟುಂಬದಲ್ಲಿನ ಅರ್ಹ ಮತದಾರರಿಗೂ ಕೂಡ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯಲ್ಲಿ ಭಾಗವಹಿಸಿ ತಮ್ಮ ಹೆಸರನ್ನು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳುವಂತೆ ತಿಳಿಸಬೇಕು ಎಂದು ತಿಳಿಸಿದರು.

ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಅಂಬಣ್ಣ ನಾಯಕ ಮಾತನಾಡಿದರು. ಕಾಲೇಜಿನಿಂದ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ವಿದ್ಯಾರ್ಥಿಗಳು ಎಸ್.ಐ.ಆರ್. 2026 ರ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಎನ್.ಎಸ್.ಎಸ್ ಘಟಕಧಿಕಾರಿ ಶರಣಬಸವ, ಕಾಲೇಜಿನ ಉಪನ್ಯಾಸಕರಾದ ಡಾ. ಹುಲಿಯಪ್ಪ ದುಮತಿ, ಡಾ. ಸಚಿನ್ ಹುಗ್ಗಿ ,ರೇಣುಕಾ, ಸಿಬ್ಬಂದಿ ಸಂತೋಷ, ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## "ಸ್ಮಶಾನಕ್ಕೆ ತೆರಳಲು ದಾರಿಯೇ ಇಲ್ಲ ನೀರಿನಲ್ಲೇ ಶವ ಯಾತ್ರೆ ಅನಿವಾರ್ಯ"

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಗ್ರಾಮೀಣ ಕ್ಷೇತ್ರದ ಗುಂಜಳ್ಳಿ ಗ್ರಾಮದಲ್ಲಿ ಸ್ಮಶಾನಕ್ಕೆ ತೆರಳಲು ಸಮರ್ಪಕ ರಸ್ತೆ ಇಲ್ಲದ ಕಾರಣ, ಮೃತದೇಹವನ್ನು ನೀರಿನಲ್ಲೇ ಹೊತ್ತುಕೊಂಡು ಹೋಗಿ ಅಂತ್ಯಸಂಸ್ಕಾರ ನೆರವೇರಿಸಿದ ಘಟನೆ ನಡೆದಿದೆ.**



ಗ್ರಾಮದಲ್ಲಿ ಮೃತರ ಅಂತ್ಯ ಸಂಸ್ಕಾರ ಮಾಡಲು ಮೃತದೇಹವನ್ನು ತೆಪ್ಪದಲ್ಲಿ ತೆಗೆದುಕೊಂಡು ಅಂತ್ಯ ಸಂಸ್ಕಾರ ಮಾಡಬೇಕಿದೆ. ಗ್ರಾಮದಲ್ಲಿ ವೃದ್ಧೆಯೊಬ್ಬರು ಮೃತಪಟ್ಟಿದ್ದು, ಮೃತರ ಅಂತ್ಯ ಸಂಸ್ಕಾರಕ್ಕಾಗಿ ಮಳೆ ನೀರು ತುಂಬಿ ಹರಿಯುತ್ತಿರುವ ದಾರಿಯಲ್ಲಿ ಶವವನ್ನು ಹೊತ್ತು ಸಾಗಬೇಕಾದ ಪರಿಸ್ಥಿತಿ ಗ್ರಾಮಸ್ಥರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಸ್ಥಳೀಯ ನಿವಾಸಿ ಮಾಹಿತಿ ನೀಡಿ, ಸುಮಾರು 20 ವರ್ಷಗಳಿಂದ ಈ ಸಮಸ್ಯೆ ಮುಂದುವರಿದಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಯಾವುದೇ ಶಾಶ್ವತ ಪರಿಹಾರ ಕಲ್ಪಿಸಿಲ್ಲ ಎಂದು ಆರೋಪಿಸಿದರು. ಮಳೆಗಾಲದಲ್ಲಿ ಸ್ಮಶಾನಕ್ಕೆ ತೆರಳುವುದು ಇನ್ನಷ್ಟು ದುಸ್ತರವಾಗಿದ್ದು, ಮೃತರ ಕುಟುಂಬದವರು ಹಾಗೂ ಗ್ರಾಮಸ್ಥರು ಜೀವದ ಹಂಗು ತೊರೆದು ನೀರಿನಲ್ಲೇ ನಡೆದು ಅಂತ್ಯಸಂಸ್ಕಾರ ನೆರವೇರಿಸಬೇಕಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಈ ಮೂಲ ಸೌಕರ್ಯ ಸಮಸ್ಯೆ ಕುರಿತು ಶಾಸಕರು ಸಂಸದರು ಕೂಡಲೇ ಸ್ಮಶಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹಾಗೂ ಸೇತುವೆ ನಿರ್ಮಿಸಿ ಸಾರ್ವಜನಿಕರ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕೆಂದು ಗ್ರಾಮಸ್ಥರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

## ಐದನಾಳ ಎಸ್‌ಸಿ ವಾರ್ಡ್‌ನಲ್ಲಿ ರಸ್ತೆ-ಚರಂಡಿ ದುರಸ್ತಿಗೆ ಮಹಿಳೆಯರ ಮನವಿ

❑ ನೈಜ್ಯ ದೇಸೆ ನ್ಯೂಸ್

**ಲಿಂಗಸೂಗೂರು: ತಾಲ್ಲೂಕಿನ ಐದನಾಳ ಗ್ರಾಮದ ಎಸ್‌ಸಿ ವಾರ್ಡ್‌ನಲ್ಲಿ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿರುವ ಹಿನ್ನೆಲೆಯಲ್ಲಿ ಮಹಿಳೆಯರು ಗ್ರಾಮ ಪಂಚಾಯತ್‌ಗೆ ತೆರಳಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.**




ವಾರ್ಡ್‌ನ ರಸ್ತೆಗಳು ಹಾಳಾಗಿದ್ದು, ಚರಂಡಿ ಸಮರ್ಪಕವಾಗಿಲ್ಲದ ಕಾರಣ ಮನೆಗಳ ಮುಂಭಾಗ ಮಳೆ ನೀರು ನಿಂತುಕೊಳ್ಳುತ್ತಿದೆ. ಇದರಿಂದ ಸಾರ್ವಜನಿಕರು, ವಿಶೇಷವಾಗಿ ವಯೋವೃದ್ಧರು ಓಡಾಡಲು ತೀವ್ರ ತೊಂದರೆ ಅನುಭವಿಸುತ್ತಿದ್ದು, ಕಾಲು ಜಾರಿ ಬೀಳುವ ಘಟನೆಗಳೂ ಸಂಭವಿಸುತ್ತಿವೆ ಎಂದು ಮಹಿಳೆಯರು ದೂರಿದರು.

ನಿಂತ ನೀರಿನಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಮಕ್ಕಳು ಸೇರಿದಂತೆ ಸ್ಥಳೀಯರಲ್ಲಿ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಸಮಸ್ಯೆಯನ್ನು ಕೂಡಲೇ ಪರಿಹರಿಸಿ ರಸ್ತೆ ಹಾಗೂ ಚರಂಡಿಯನ್ನು ದುರಸ್ತಿಗೊಳಿಸುವಂತೆ ಮಹಿಳೆಯರು ಪಂಚಾಯತ್ ಅಧಿಕಾರಿಗಳನ್ನು ಆಗ್ರಹಿಸಿದರು. ಅಗತ್ಯ ಕ್ರಮ ಕೈಗೊಂಡು ಸಾರ್ವಜನಿಕರಿಗೆ ಮೂಲಸೌಕರ್ಯ ಕಲ್ಪಿಸುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ವೇಳೆ ರಾಧಾ ಐದನಾಳ ಹಾಗೂ ಗ್ರಾಮಸ್ಥರು ಇದ್ದರು.

# ವಿದ್ಯಾರ್ಥಿಗಳ ಮೇಲಿನ ಪೊಲೀಸ್ ಲಾಠಿಚಾರ್ಜ್ ಪ್ರಜಾಪ್ರಭುತ್ವಕ್ಕೆ ಧಕ್ಕೆ: ರವಿ ಪಾಟೀಲ್

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು; ವಿದ್ಯಾರ್ಥಿಗಳ ಮೇಲೆ ನಡೆದ ಪೊಲೀಸ್ ಲಾಠಿಚಾರ್ಜ್‌ನ್ನು ಖಂಡಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಇತರ ಕಾಂಗ್ರೆಸ್ ನಾಯಕರ ವಿರುದ್ಧ ಪೊಲೀಸರು ಬಲಪ್ರಯೋಗಕ್ಕೆ ಮುಂದಾಗಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ತರುವ ಕ್ರಮವಾಗಿದೆ ಎಂದು ರಾಜ್ಯ ಕಾಂಗ್ರೆಸ್ ಮುಖಂಡ ರವಿ ಪಾಟೀಲ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಪ್ರತಿಭಟಿಸುವುದು ಮತ್ತು ತಮ್ಮ ಧ್ವನಿಯನ್ನು ಎತ್ತುವುದು ಭಾರತದ ಸಂವಿಧಾನ ನೀಡಿರುವ ಮೂಲಭೂತ ಹಕ್ಕಾಗಿದೆ. ಲಾಠಿ, ಬಂಧನ ಹಾಗೂ ದಮನಕಾರಿ ಕ್ರಮಗಳ ಮೂಲಕ ನ್ಯಾಯದ ಧ್ವನಿಯನ್ನು ಹತ್ತಿಕ್ಕಲು ಯಾವುದೇ ಸರ್ಕಾರಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ವಿದ್ಯಾರ್ಥಿಗಳು, ಯುವಕರು ಹಾಗೂ ಸಾಮಾನ್ಯ ಜನರು ತಮ್ಮ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟವನ್ನು ಲಾಠಿಚಾರ್ಜ್, ಅಶ್ರುವಾಯು ಹಾಗೂ ಬಲಪ್ರಯೋಗದ ಮೂಲಕ ಹತ್ತಿಕ್ಕುವ ಪ್ರಯತ್ನಗಳು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದ್ದು, ಇಂತಹ ಕ್ರಮಗಳು ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಧಕ್ಕೆ ತರುತ್ತವೆ ಎಂದು ಅವರು ತಿಳಿಸಿದ್ದಾರೆ.



ವಿದ್ಯಾರ್ಥಿಗಳ ಮೇಲಿನ ಪೊಲೀಸ್ ಕ್ರಮವನ್ನು ವಿರೋಧಿಸಿ ಧ್ವನಿ ಎತ್ತಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಸೇರಿದಂತೆ ಹಲವು ವಿಪಕ್ಷ ನಾಯಕರನ್ನು ದೆಹಲಿ ಪೊಲೀಸರು ಬಂಧಿಸಿರುವುದು ಅತ್ಯಂತ ಖಂಡನೀಯ. ಜನರ ಪರವಾಗಿ ಮಾತನಾಡುವ ನಾಯಕರನ್ನು ಬಂಧಿಸುವುದು ಪ್ರಜಾಪ್ರಭುತ್ವದ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನವಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಂತಿಯುತ ಪ್ರತಿಭಟನೆ ಪ್ರತಿಯೊಬ್ಬ ನಾಗರಿಕನ ಹಕ್ಕಾಗಿದ್ದು, ಕೇಂದ್ರ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ದಮನಕಾರಿ ಪ್ರವೃತ್ತಿಯನ್ನು ಅನುಸರಿಸುತ್ತಿದೆ. ಕೇಂದ್ರ ಸರ್ಕಾರ ತನ್ನ ಹಠಮಾರಿ ಧೋರಣೆಯನ್ನು ಕೈಬಿಟ್ಟು ಪರಿಸ್ಥಿತಿಯನ್ನು ಸಂವೇದನಾಶೀಲವಾಗಿ ನಿರ್ವಹಿಸಬೇಕು. ಇಲ್ಲವಾದರೆ ದೇಶಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

ವಿದ್ಯಾರ್ಥಿಗಳ ನ್ಯಾಯಯುತ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿರುವ ರವಿ ಪಾಟೀಲ್, ಬಂಧನಕ್ಕೊಳಗಾಗಿರುವ ಎಲ್ಲಾ ವಿದ್ಯಾರ್ಥಿಗಳು ಹಾಗೂ ವಿಪಕ್ಷ ನಾಯಕರನ್ನು ತಕ್ಷಣವೇ ಬೇಷರತ್ತಾಗಿ ಬಿಡುಗಡೆ ಮಾಡಬೇಕು. ಅಲ್ಲದೆ, ಈ ಘಟನೆಯ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

## ಸಾಹಿತ್ಯ ಸಿಂಚನ

### ಚೈತನ್ಯದ ಚಿಲುಮೆ

ಚೈತನ್ಯದ ಚಿಲುಮೆ ಚಿಮ್ಮುತಿರಲಿ,
ಚಿಂತನೆಗೆ ಹೊಸ ದಿಕ್ಕು ತೋರಿಸುತಿರಲಿ.
ಮನದ ಮಂದಿರದಲ್ಲಿ ಆಶೆಯ ದೀಪ,
ಬೆಳಗಿಸುತಿರಲಿ ಸದಾ ಅನೂಪ.

ಸೋಲಿನ ಮೋಡಗಳು ಸುತ್ತುವರಿದರೂ,
ಧೈರ್ಯದ ಬೆಳಕು ಮರೆಯಾಗದಿರಲಿ.
ಸಂಕಲ್ಪದ ರೆಕ್ಕೆಗಳನ್ನು ಹರಡಿಕೊಂಡು,
ಯಶಸ್ಸಿನ ಗಗನ ಮುಟ್ಟೋಣ ಎಲ್ಲರೂ.

ಪ್ರೀತಿಯ ಮಾತು ಹೃದಯ ಮುಟ್ಟಲಿ,
ಕರುಣೆಯ ನದಿ ಸದಾ ಹರಿಯಲಿ.
ಸಹನೆಯ ಹೂವು ಜೀವನದಲ್ಲಿ ಅರಳಿ,
ಸಂತಸದ ಪರಿಮಳ ಎಲ್ಲೆಡೆ ಹರಡಲಿ.

ಜ್ಞಾನದ ಬೆಳಕು ಕತ್ತಲೆ ಕಳೆಯಲಿ,
ಸೇವೆಯ ದಾರಿ ಬದುಕು ಸಾರ್ಥಕಗೊಳಿಸಲಿ.
ಏಕತೆಯ ಬಲ ನಮ್ಮ ಶಕ್ತಿಯಾಗಲಿ,
ಮಾನವೀಯತೆ ನಮ್ಮ ಗುರುತಾಗಲಿ.

ಪ್ರತಿ ಬೆಳಗು ಹೊಸ ಕನಸಾಗಲಿ,
ಪ್ರತಿ ಸಂಜೆ ಸಾಧನೆಯ ನೆನಪಾಗಲಿ.
ಚೈತನ್ಯದ ಚಿಲುಮೆಯಾಗಿ ನಾವೆಲ್ಲರೂ,
ಹೊಸ ಯುಗದ ನಿರ್ಮಾಪಕರಾಗೋಣ
ಎಲ್ಲರೂ.

–ಶ್ರೀಮತಿ ಕವಿತಾ ಹಿರೇಮಠ್

## ರಾಯಚೂರು ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ಎಸ್.ಐ.ಆರ್ ಜಾಗೃತಿ ಕಾರ್ಯಕ್ರಮ

❑ ನೈಜ್ಯ ದೇಸೆ ನ್ಯೂಸ್

ರಾಯಚೂರು ಜುಲೈ 23 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ರಾಯಚೂರು ಜಿಲ್ಲೆಯ ಎನ್.ಆರ್.ಎಲ್.ಎಮ್ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಸಖಿಯರಿಗೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಎಸ್.ಐ.ಆರ್ ಜಾಗೃತಿ ಕಾರ್ಯಕ್ರಮವನ್ನು ನಗರದ ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ಗುರುವಾರ ಜರುಗಿತು.




ಈ ವೇಳೆ ಜಿಲ್ಲಾ ಪಂಚಾಯತಿಯ ಸಹಾಯಕ ಕಾರ್ಯದರ್ಶಿ ರಾಘವೇಂದ್ರ ಕೆ., ಅವರು ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಮತದಾನ ಬಹಳ ಮಹತ್ವದ್ದು, ಅರ್ಹ ಮತದಾರರ ಹೆಸರು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ಸೇರಬೇಕು. ಭಾರತ ಚುನಾವಣೆ ನಿರ್ದೇಶನದಂತೆ ಜಿಲ್ಲೆಯಲ್ಲಿ ಎಸ್.ಐ.ಆರ್ ನಡೆಯುತ್ತಿದ್ದು, ಅರ್ಹ ಮತದಾರರ ಪಟ್ಟಿಯನ್ನು ತಯಾರಿಸುವುದೇ ಇದರ ಪ್ರಮುಖ ಉದ್ದೇಶವಾಗಿದೆ. ಜೂನ್ 30 ರಿಂದ ಆಗಷ್ಟ್ 8ರವರೆಗೆ ಈ ಪ್ರಕ್ರಿಯೆ ನಡಿಯುತ್ತದೆ. ಕಾರಣ ಎಲ್ಲಾರೂ ಎಸ್.ಐ.ಆರ್ ಕಾರ್ಯಕ್ಕೆ ಕೈಜೋಡಿಸಿ ಯಶಸ್ವಿಗೊಳಿಸಲು ಕರೆ ನೀಡಿದರು. ಈ ವೇಳೆ ಜಿಲ್ಲಾ ಪಂಚಾಯತಿ ಆಡಳಿತ ವಿಭಾಗದ ಸಹಾಯಕ ನಿರ್ದೇಶಕಿ ಮಹೇಶ್ವರಿ ಅವರು ಮಾತನಾಡಿ, ಎಸ್.ಐ.ಆರ್ ಕಾರ್ಯಕ್ರಮ ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಚುರುಕಾಗಿ ನಡೆಯುತ್ತಿದ್ದು, ಮತಗಟ್ಟೆ ಮಟ್ಟದ ಅಧಿಕಾರಿ ಅವರು ಮನೆ-ಮನೆಗೆ ಹೋಗಿ ಎನ್ಯುಮರೇಷನ್ ಫಾರ್ಮ್ (ಗಣತಿ ಅರ್ಜಿ) ಹಂಚುವ ಕಾರ್ಯದಲ್ಲಿ ಶೇ.90ಕ್ಕೂ ಹೆಚ್ಚಿನಷ್ಟು ಪ್ರಕ್ರಿಯೆ ಮುಗಿದಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜಿಲ್ಲೆಯ ಎಲ್ಲಾ ಎನ್.ಆರ್.ಎಲ್.ಎಮ್ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಸಖಿಯರಿಗೆ ಹಾಗೂ ಸಿಬ್ಬಂದಿಯವರು ದಯವಿಟ್ಟು ನಿಮ್ಮ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಅರ್ಹ ಮತದಾರರನ್ನು ಸೇರಿಸುವ ಕಾರ್ಯದಲ್ಲಿ ಎಸ್.ಐ.ಆರ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ವ್ಯವಸ್ಥಾಪಕರಾದ ವಿರೇಶ ಆರ್.ಪಿ., ಅಧೀಕ್ಷಕರಾದ ಮಹೆಬೂಬ್, ಸಲೀಂ ಮಲಿಕ್ ಹಾಗೂ ಜಿಲ್ಲಾ ಮತ್ತು ತಾಲ್ಲುಕು ಮಟ್ಟದ ಎನ್.ಆರ್.ಎಲ್.ಎಮ್ ಸಂಯೋಜಕರು ಸೇರಿದಂತೆ ಇತರರು ಇದ್ದರು.

# ಹೆದ್ದಾರಿ ಕಾಮಗಾರಿಗೆ ಸರ್ವೀಸ್ ರಸ್ತೆಗೆ ರೈತರ ಆಗ್ರಹ: ಪೊಲೀಸ್ ಬಂದೋಬಸ್ತ್

❑ ನೈಜ್ಯ ದೇಸೆ ನ್ಯೂಸ್

ಮಸ್ಕಿ: ತಾಲ್ಲೂಕಿನ ಗೋನವಾರ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಭಾರತಮಾಲಾ ಯೋಜನೆಯಡಿ ನಿರ್ಮಾಣವಾಗುತ್ತಿರುವ 748(ಎ) ಬೆಳಗಾವಿ–ಹೈದರಾಬಾದ್ ಹೆದ್ದಾರಿ ಕಾಮಗಾರಿಗೆ ಸಂಬಂಧಿಸಿದಂತೆ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸರ್ವಿಸ್ ರಸ್ತೆ, ಹೆಚ್ಚುವರಿ ಸೇತುವೆ ನಿರ್ಮಾಣ ಹಾಗೂ ಬೆಳೆ ಪರಿಹಾರಕ್ಕೆ ಆಗ್ರಹಿಸಿ ರೈತರು ಕಾಮಗಾರಿಗೆ ಅಡ್ಡಿಪಡಿಸಿ ಪ್ರತಿಭಟನೆ ನಡೆಸಿದರು.

ಗೋನವಾರ ಗ್ರಾಮದ ರೈತರು ಹಾಗೂ ಗ್ರಾಮಸ್ಥರು ಕೃಷಿ ಜಮೀನುಗಳಿಗೆ ತೆರಳಲು ಸೇತುವೆ ಹಾಗೂ ಸರ್ವಿಸ್ ರಸ್ತೆ ನಿರ್ಮಿಸುವಂತೆ ಸುಮಾರು ಬಾರಿ ಪ್ರತಿಭಟನೆ ಮಾಡಿದರು ಒತ್ತಾಯದಿಂದ ಒಕ್ಕಲೆಬ್ಬಿಸುತ್ತಿದ್ದಾರೆ. ಹೆದ್ದಾರಿ ಕಾಮಗಾರಿಯಿಂದ ಗ್ರಾಮಸ್ಥರು



ಹಾಗೂ ರೈತರಿಗೆ ಕೃಷಿ ಜಮೀನುಗಳಿಗೆ ತೆರಳಲು ತೊಂದರೆಯಾಗಲಿದೆ. ಜಮೀನುಗಳ ನಡುವೆ ಸಂಚಾರ ಸಂಪರ್ಕ ಕಡಿತಗೊಳ್ಳುವ ಸಾಧ್ಯತೆ ಇದ್ದು, ಮಳೆಗಾಲದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಆರೋಪಿಸಿದರು.

ಹೆದ್ದಾರಿ ಕಾಮಗಾರಿಯಿಂದ ಹಲವು ಎಕರೆ ಪ್ರದೇಶದ ಬೆಳೆಗಳಿಗೆ ಹಾನಿಯಾಗಿದ್ದು, ಕೆಲವೆಡೆ ಹೊಲಗಳಿಗೆ ಹೋಗುವ ಸಾಂಪ್ರದಾಯಿಕ ಮಾರ್ಗಗಳು ಮುಚ್ಚಲ್ಪಟ್ಟಿವೆ. ಈಗಾಗಲೇ ನಿರ್ಮಿಸಿರುವ ಯೋಜನಾ ವಿನ್ಯಾಸದಲ್ಲಿ ರೈತರ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಕಲ್ಪಿಸಿಲ್ಲ ಎಂದು ಅಧಿಕಾರಿಗಳ ಗಮನಕ್ಕೆ ತಂದರು. ಪ್ರತಿಭಟನೆ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಭದ್ರತೆ ಏರ್ಪಡಿಸಲಾಗಿತ್ತು. ಸ್ಥಳಕ್ಕೆ ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲ್ಲಶೆಟ್ಟಿ, ತಹಶೀಲ್ದಾರ್ ಮಂಜುನಾಥ ಬೋಗಾವತಿ, ಡಿವೈಎಸ್‌ಪಿ ದತ್ತಾತ್ರೇಯ ಕರ್ನಾಡ್ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಭೇಟಿ ನೀಡಿ ರೈತರೊಂದಿಗೆ ಸುದೀರ್ಘ ಮಾತುಕತೆ ನಡೆಸಿದರು.

ಅಧಿಕಾರಿಗಳ ಭರವಸೆಯ ಬಳಿಕ ಪ್ರತಿಭಟನಾ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ತಿಳಿಗೊಂಡಿತು. ರೈತರು ತಾತ್ಕಾಲಿಕವಾಗಿ ತಮ್ಮ ಪ್ರತಿಭಟನೆಯನ್ನು ಹಿಂಪಡೆದಿದ್ದು, ನೀಡಿದ ಭರವಸೆಗಳನ್ನು ಶೀಘ್ರದಲ್ಲಿ ಅನುಷ್ಠಾನಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಪ್ರತಿಭಟನೆಯಲ್ಲಿ ಗೋನವಾರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು, ರೈತ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

# ಡೆಂಗ್ಯೂ ಜ್ವರ ಭಯ ಬೇಡ ಎಚ್ಚರ ಇರಲಿ: ಡಾ. ಅಶ್ವಾಕ್ ಹುಸೇನ್




❑ ನೈಜ್ಯ ದೇಸೆ ನ್ಯೂಸ್

ಜಗತ್ತಿನಲ್ಲಿ ಹಲವಾರು ಜಾತಿಯ ಸೊಳ್ಳೆಗಳು ಇವೆ ಆದರೆ ಈಡೀಸ್ ಈಜಿಪ್ಟ್, ಅನಾಫಿಲಿಸ್, ಕ್ಯೂಲೆಕ್ಸ ಈ ಮೂರು ಸೊಳ್ಳೆಗಳು ಮನುಷ್ಯರನ್ನು ಅಪಾಯಕ್ಕಿಡು ಮಾಡುತ್ತವೆ. ಇವುಗಳ ಕಚ್ಚುವಿಕೆಯಿಂದ ಸುರಕ್ಷಿತವಾಗಿರುವುದಕ್ಕೆ ನಾವೆಲ್ಲರೂ ಪ್ರಯತ್ನಿಸೋಣವೆಂದು ರಾಗಿ ಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಆಶ್ವಕ್ ಹುಸೇನ್ ತಿಳಿಸಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಹಾಗೂ ಶಿಕ್ಷಣ ಇಲಾಖೆ ಸಹಯೋಗ ದೊಂದಿಗೆ ಸರಕಾರಿ ಪ್ರಾಥಮಿಕ ಶಾಲೆಯ ಪದ್ಮಾವತಿ ಮುಖ್ಯ ಗುರುಗಳ ಅಧ್ಯಕ್ಷತೆಯಲ್ಲಿ ಡೆಂಗ್ಯೂ ವಿರೋಧಿ ಮಾಸಾಚರಣೆ ಮಾತನಾಡಿ, ಮಳೆ ಪ್ರಾರಂಭವಾಗಿ ಅಲ್ಲಲ್ಲಿ ಮಳೆ ನೀರು ನಿಂತು ಸೊಳ್ಳೆಗಳ ಹಾವಳಿ ಜಾಸ್ತಿಯಾಗುತ್ತದೆ. ಡೆಂಗ್ಯೂ ಜ್ವರ ವೈರಸ್‌ನಿಂದ ಬರುವ ಕಾಯಿಲೆ, ಸಾಂಕ್ರಾಮಿಕ ರೋಗವಾಗಿದ್ದು ಈಡೀಸ್ ಈಜಿಪ್ಟೈ ಎಂಬ ಹೆಣ್ಣು ಸೋಂಕಿತ ಸೊಳ್ಳೆ ಕಚ್ಚುವುದರಿಂದ ಬರುವ ಕಾಯಿಲೆಯಾಗಿದೆ. ಇದು ಹಗಲಲ್ಲೆ ಕಚ್ಚುತ್ತೆ. ಈಡಿಸ್ ಈಜಿಪ್ಟೈ ಸೊಳ್ಳೆಗೆ ಟೈಗರ್ ಸೊಳ್ಳೆಯಂತಲೂ ಕರೆಯುತ್ತಾರೆ. ಈ ಸೊಳ್ಳೆ ಸ್ವಚ್ಛವಾದ ನೀರಿನಲ್ಲಿ ಬೆಳೆಯುತ್ತದೆ. ಹಗಲಲ್ಲೆ ಕಚ್ಚುತ್ತದೆ. ನೀರಿನ ಪರಿಕರಗಳಲ್ಲಿ, ಘನ ತ್ಯಾಜ್ಯ ವಸ್ತುಗಳಲ್ಲಿ, ಮಳೆ ನೀರು ನಿಂತು ಸೊಳ್ಳೆ ಉತ್ಪತ್ತಿಯಾಗುತ್ತವೆ. ನಿಂತ ನೀರು ಸೊಳ್ಳೆ ಉತ್ಪತ್ತಿ ತಾಣಗಳು, ಎಂದು ತಿಳಿಸಿದರು. ಡೆಂಗ್ಯೂ ಜ್ವರ ಮೂರು ವಿಧ ಡೆಂಗ್ಯೂ ಜ್ವರ, ಡೆಂಗ್ಯೂ ರಕ್ತಸ್ರಾವ ಡೆಂಗ್ಯೂ ಶಾಕ್ ಸಿಂಡ್ರೋಮ್, ಡೆಂಗ್ಯೂ ಜ್ವರಕ್ಕೆ ಚಿಕಿತ್ಸೆ ಇರುವುದಿಲ್ಲ, ರೋಗದ ಲಕ್ಷಣಗಳ ಅನುಗುಣವಾಗಿ ಚಿಕಿತ್ಸೆ ನೀಡಲಾಗುತ್ತದೆ ಎಂದು ತಿಳಿಸಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜ. ಕೆ ಮಾತನಾಡಿ, ಮುಂಜಾಗ್ರತಾ ಕ್ರಮಗಳಲ್ಲಿ ಮೂರು ವಿಧ, ಸ್ವಯಂರಕ್ಷಣಾ ವಿಧಾನ,ರಾಸಾಯನಿಕ ವಿಧಾನ, ಜೈವಿಕ ವಿಧಾನಗಳು, ಸ್ವಯಂ ರಕ್ಷಣಾ ವಿಧಾನಗಳಾದ ಮೈ ತುಂಬಾ ಬಟ್ಟೆ ಧರಿಸಿವದು, ಸೊಳ್ಳೆ ಪರದೆ ಉಪಯೋಗಿಸಬೇಕು ಕಿಡಿಕಿಗಳಿಗೆ ಜಾಲರಿ ಅಳವಡಿಸಬೇಕು, ಗುಡ್ ನೈಟ್, ಸೊಳ್ಳೆ ಹೊಡೆಯುವ ಬ್ಯಾಟ್, ಉಪಯೋಗಿಸಬೇಕು ಎಂದು ತಿಳಿಸಿದರು. ಕುಡಿಯಲು ಬಳಸಲಾರದ ನೀರಿನ ಸಂಗ್ರಹಕಗಳಿಗೆ ಟಿಮೋಫಾಸ್ ಹಾಕಿಸುವುದು. ಶಾಶ್ವತ ನೀರು ನಿಲ್ಲುವ ಸ್ಥಳಗಳಲ್ಲಿ ಗಪ್ಪಿ, ಗಂಬೂಸಿಯಾ ಮೀನಗಳನ್ನು ಬಿಡುವುದು. ನೀರಿನ ಪರಿಕರಗಳು ವಾರಕ್ಕೊಮ್ಮೆ ತೊಳೆದು ಒಣಗಿಸಬೇಕೆಂದು ( ಡ್ರೈ ಡೇ) ಮಾಡಲು ತಿಳಿಸಿದರು.

ಯಾವುದೇ ಜ್ವರ ಇರಲಿ ಹತ್ತಿರ ಆಸ್ಪತ್ರೆಗೆ ಹೋಗಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಡೆಂಗ್ಯೂ ಜ್ವರ ನಿಯಂತ್ರಣ ನಮ್ಮೆಲ್ಲರ ಜವಾಬ್ದಾರಿ. ಪ್ರತಿಯೊಂದು ಶಾಲೆಯ ಒಳಾಂಗಣ ಸುತ್ತ ಮುತ್ತ ಸ್ವಚ್ಚತೆಗೆ ಆದ್ಯತೆ ಕೊಡಬೇಕು. ಶಾಲೆ ಒಳಾಂಗಣದಲ್ಲಿ ನೀರು ನಿಲ್ಲದಂತೆ ನೋಡಿ ಕೊಳ್ಳಬೇಕು. ಲಾರ್ವಾ ಮುಕ್ತ ಶಾಲೆ ಬಗ್ಗೆ ಮಾಹಿತಿ ನೀಡಿದರು. ವಿದ್ಯಾರ್ಥಿಗಳಿಗೆ ಯಾವುದೇ ಜ್ವರ ಇರಲಿ ರಕ್ತ ಪರೀಕ್ಷೆ ಮಾಡಿಸಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಮರಿಯಾ, ಆರೋಗ್ಯ ನಿರೀಕ್ಷಣಾದಿಕಾರಿ ಅರುಣ ಕುಮಾರ್, ಶಿಕ್ಷಕರು, ಮಕ್ಕಳು ಹಾಜರಿದ್ದರು.

# ರಾಯಚೂರು ಸಮೀಪದ ಬಿಚ್ಚಾಲಿಯಲ್ಲಿ SIR ಸರ್ವೇ ಕಾರ್ಯ ಚುರುಕು: ಮತದಾರರ ಪಟ್ಟಿಗೆ ಜಾಗೃತಿ

❑ ನೈಜ್ಯ ದೇಸೆ ನ್ಯೂಸ್

ಬಿಚ್ಚಾಲಿ: ಗ್ರಾಮ ಆಡಳಿತಾಧಿಕಾರಿ ವಾಜೇಂದ್ರ ಅವರ ಮಾರ್ಗದರ್ಶನದಲ್ಲಿ ರಾಯಚೂರು ಸಮೀಪದ ಬಿಚ್ಚಾಲಿ ಗ್ರಾಮದಲ್ಲಿ ಖಋಖ (ವಿಶೇಷ ಪರಿಷ್ಕರಣೆ) ಸರ್ವೇ ಕಾರ್ಯವು ಭರದಿಂದ ಸಾಗುತ್ತಿದೆ.

ಗ್ರಾಮದ ಪ್ರತಿಯೊಬ್ಬ ಹಿರಿಯ ಮುಖಂಡರು ಹಾಗೂ ಸಾರ್ವಜನಿಕರು ಜಾಗೃತರಾಗಿ ಈ ಸರ್ವೇ ಕಾರ್ಯದಲ್ಲಿ ಭಾಗವಹಿಸಿ, ತಮ್ಮ ಹೆಸರು ಹಾಗೂ ಮತದಾರರ ಮಾಹಿತಿಯನ್ನು ಪರಿಶೀಲಿಸಿಕೊಳ್ಳುವಂತೆ ಮನವಿ ಮಾಡಲಾಗಿದೆ. SIR ಸರ್ವೇ ಪ್ರಕ್ರಿಯೆಯು ಇನ್ನು




ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿದ್ದು, ಇದುವರೆಗೆ ತಮ್ಮ ಹೆಸರು ಹಾಗೂ ಮಾಹಿತಿಯನ್ನು ನವೀಕರಿಸದವರು ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ತಮ್ಮ ಮತದಾನದ ಹಕ್ಕನ್ನು ಕಾಯ್ದುಕೊಳ್ಳುವಂತೆ ಜಾಗೃತಿ ಮೂಡಿಸಲಾಗಿದೆ.

ಮತಗಟ್ಟೆ ಮಟ್ಟದ ಅಧಿಕಾರಿಗಳು (BLO)

– ಕಸ್ತೂರಿ ವಾರ್ಡ್ ನಂ.1 ಹನುಮಾನ್ ನಗರ
– ನರ್ಮದಾ ವಾರ್ಡ್ ನಂ.2 ವಾಲ್ಮೀಕಿ ನಗರ
– ದಶವಂತ ವಾರ್ಡ್ ನಂ. 3, ಚನ್ನವೀರ ನಗರ ಹಾಗೂ ಬಿಚ್ಚಾಲಿ ಕ್ಯಾಂಪ್

BLA ಮುಖಂಡರು

1. ಎ. ಬಸವರಾಜ್ ಕಾಂಗ್ರೆಸ್ ಮುಖಂಡರು, ವಾಲ್ಮೀಕಿ ನಗರ, ಬಿಚ್ಚಾಲಿ
2. ಖಾಜಾ ಹುಸೇನ್ ಕಾಂಗ್ರೆಸ್ ಮುಖಂಡರು ಹಾಗೂ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಹನುಮಾನ್ ನಗರ, ಬಿಚ್ಚಾಲಿ
3. ಕೆ. ಪ್ರಕಾಶ್ ಕಾಂಗ್ರೆಸ್ ಮುಖಂಡರು, ಹನುಮಾನ್ ನಗರ, ಬಿಚ್ಚಾಲಿ
4. ಬಿ.ಕೆ. ಸೀನು ಕಾಂಗ್ರೆಸ್ ಮುಖಂಡರು, ವಾಲ್ಮೀಕಿ ನಗರ, ಬಿಚ್ಚಾಲಿ
5. ಹನುಮಂತ ನಾಯಕ್ ಕಾಂಗ್ರೆಸ್ ಮುಖಂಡರು, ವಾಲ್ಮೀಕಿ ನಗರ, ಬಿಚ್ಚಾಲಿ
6. ವೆಂಕಟೇಶ್ ಕಾಂಗ್ರೆಸ್ ಮುಖಂಡರು, ವಾಲ್ಮೀಕಿ ನಗರ, ಬಿಚ್ಚಾಲಿ ಹಾಜರಿದ್ದರು

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಹುಟ್ಟು ಹಬ್ಬದಲ್ಲಿ ಸಾರ್ಥಕತೆ ಮೆರೆದ ಹುಣಸಗಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ. ಚಂದ್ರಶೇಖರ್ ಎನ. ದಂಡಿನ್.

❑ ನೈಜ್ಯ ದೇಸೆ ನ್ಯೂಸ್

ಯಾದಗಿರಿ: ಜಿಲ್ಲೆಯ ಹುಣಸಿಗಿ ತಾಲೂಕಿನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿರ್ತಕ್ಕಂತ ಚಂದ್ರಶೇಖರ್ ಎನ ದಂಡಿನ್ ಇವರು ತಮ್ಮ ಹುಟ್ಟು ಹಬ್ಬವನ್ನು ಸಾರ್ವಜನಿಕರಿಗೆ ಸಹಾಯವಾಗುವ ರೀತಿಯಿಂದ ಆಚರಿಸಿಕೊಂಡರು. ಇದೇ ಸಂದರ್ಭದಲ್ಲಿ ಚಂದ್ರಶೇಖರ್ ಎನ ದಂಡಿನ್ ಅವರು ಮಾತನಾಡಿ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಮಳೆಯ ಅಭಾವದಿಂದ ಕರ್ನಾಟಕ ರಾಜ್ಯವು ಬರಗಾಲವಾಗಿದೆ.

ಬರಗಾಲದಲ್ಲಿ. ನನ್ನ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ನನ್ನ ಅಭಿಮಾನಿಗಳು ಮತ್ತು ನನ್ನ ಗೆಳೆಯ ಬಳಗವನ್ನು ಯಾರು ಆಚರಿಸಬೇಡಿ. ನಾನು ಒಂದು ಸಾರ್ವಜನಿಕರಿಗೆ ಸೇವೆ ಮಾಡುವ ಒಂದು ಕೆಲಸ ಮಾಡುತ್ತಿದ್ದೇನೆ. ಅದು ಯಾವ ಕೆಲಸವೆಂದರೆ ಸಾರ್ವಜನಿಕರಿಗೆ ದೃಷ್ಟ ಹೋದ ತಕ್ಕಂತ ಜನರಿಗೆ ದೃಷ್ಟಿ ಬರುವ ಕೆಲಸ ಮತ್ತು ಆರೋಗ್ಯದಿಂದ ಯಾರೋ ಬರುತ್ತಿದ್ದಾರೆ ನನ್ನ



ಕ್ಷೇತ್ರದಲ್ಲಿ ಅವರಿಗೆ ಉತ್ತಮ ಆರೋಗ್ಯ ಕೆಲಸ ಕೊಡಿಸುವ ಮಾಡೋಣ ಅಂದು ಹೇಳಿ ನಾನು ಈ ವರ್ಷ ಹೇಳ್ತಾ ಇದ್ದೇನೆ. ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸುರಪುರ ತಾಲೂಕು ಮತ್ತು ಹುಣಸಗಿ ತಾಲೂಕಿನ 750 ಜನರು ಇದರ ಸದುಪಯೋಗವನ್ನು ಪಡೆದುಕೊಂಡರು. ಇದರಲ್ಲಿ 250 ಜನರಿಗೆ ದೃಷ್ಟಿ ದೋಷವಿದೆ ಇವರಿಗೆ ಕಣ್ಣಿನ ಪೊರೆಯ ಆಪರೇಷನ್ ಏನು ಬೇಡ ಅಂತ ವೈದ್ಯಾಧಿಕಾರಿಗಳು ಹೇಳಿದರು. ಚಸ್ಮದ ವ್ಯವಸ್ಥೆಯನ್ನು ಮಾಡಲಾಯಿತು ಮತ್ತು ಇನ್ನು 250 ಜನರಿಗೆ ಅವರಿಗೆ ಕಣ್ಣಿನ ದೋಷವಿದ್ದು ಅವರಿಗೆ ಆಪರೇಷನ್ ಮಾಡಬೇಕಾಗುತ್ತದೆ ಎಂದು ವೈದ್ಯಾಧಿಕಾರಿಗಳು ಹೇಳಿದರು. ವೈದ್ಯಾಧಿಕಾರಿಗಳು ಹೇಳಿದ ಹಾಗೆ ಇದರಲ್ಲಿ 120 ಜನರಿಗೆ ಮೊದಲೇ ಹಂತದಲ್ಲಿ ಬೆಂಗಳೂರಿನ ಆಸ್ಪತ್ರೆಗೆ ಕಳಿಸಿ ಅವರಿಗೆ ಆಪರೇಷನ್ ಮಾಡಲು ಎಲ್ಲಾ ರೀತಿಯಿಂದ ಸಹಾಯ ಮಾಡಿದರು. ಅದೇ ರೀತಿಯಾಗಿ ಇನ್ನುಳಿದ 130 ಜನರಿಗೆ ಎರಡನೇ ಹಂತದಲ್ಲಿ ನಾವು ಕರೆದುಕೊಂಡು ಹೋಗಿ ಅವರಿಗೆ ಆಪರೇಷನ್ ಮಾಡಿಕೊಂಡು ಬರುತ್ತಿವೆ ಎಂದು ನೈಜ ದೇಶ ಮಾಧ್ಯಮದವರ ಮುಖಾಂತರ ಹೇಳಿದರು.

ಇದೇ ಸಂದರ್ಭದಲ್ಲಿ. ಚಂದ್ರಶೇಖರ್ ಎನ್ ದಂಡಿನ್ ಅಭಿಮಾನಿಗಳು ಹಾಗೂ ಅವರ ಅಭಿಮಾನಿಗಳು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಚಂದ್ರಶೇಖರ್ ಎನ್ ದಂಡಿನ್ ಸೇರಿದಂತೆ ಹಲವು ಜನರು ಪಾಲ್ಗೊಂಡಿದ್ದರು.

# ವಿಕಸಿತ್ ಭಾರತ ಜಿ ರಾಮ್ ಜಿ 125 ದಿನಗಳ ಉದ್ಯೋಗದ ಖಾತ್ರಿ

❑ ನೈಜ್ಯ ದೇಸೆ ನ್ಯೂಸ್

ರಾಯಚೂರು ಜುಲೈ 23 (ಕರ್ನಾಟಕ ವಾರ್ತೆ): ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ನಿರ್ದೇಶನದಂತೆ ವಿಕಸಿತ ಭಾರತ ಜಿ ರಾಮ್ ಜಿ125 ದಿನಗಳ ಗ್ರಾಮೀಣ ಉದ್ಯೋಗದ ಖಾತ್ರಿ ಹೊಸ ಖಾತ್ರಿ ಯೋಜನೆಯಡಿ ಗ್ರಾಮೀಣ ಪ್ರದೇಶದ ಜನರಿಗೆ ನಿರಂತರ ಕೆಲಸ ಒದಗಿಸಿ ವಲಸೆ ತಡೆಯುವ ಮತ್ತು ಉದ್ಯೋಗ ಖಾತರಿಯನ್ನು ಹೆಚ್ಚಿಸುವ ಮೂಲಕ ಗ್ರಾಮೀಣ ಕುಟುಂಬಗಳಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ವಿಕಸಿತ ಗ್ರಾಮ ಪಂಚಾಯಿತಿಯಿಂದ ವಿಕಸಿತ ಭಾರತದೆಡೆಗೆ ವಿಶೇಷ ಐಇಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

ಎಂದು ರಾಯಚೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕಾಂದೂ ಅವರು ತಿಳಿಸಿದರು. ರಾಯಚೂರು ಜಿಲ್ಲೆಯಲ್ಲಿ ತಲೆದೋರಿರುವ ಬರದಿಂದ ಗ್ರಾಮೀಣ ಪ್ರದೇಶದ ಅನೇಕ ಕುಟುಂಬಗಳಿಗೆ ಜೀವನ ನಿರ್ವಹಣೆಗಾಗಿ ವಿಕಸಿತ ಭಾರತ ? ಜಿ ರಾಮ್ ಜಿ–125 ದಿನಗಳ ಗ್ರಾಮೀಣ ಉದ್ಯೋಗದ ಖಾತ್ರಿ ಹೊಸ ಖಾತ್ರಿ ಯೋಜನೆಯಡಿ ಸ್ಥಳೀಯವಾಗಿ ಅಕುಶಲ ಕೆಲಸ ಒದಗಿಸಲಾಗುತ್ತಿದೆ. ಆದರೂ ಕೆಲವೆಡೆ ಜನರು ಉದ್ಯೋಗ ಅರಸಿ ವಲಸೆ ಹೋಗುತ್ತಿರುವುದನ್ನು ತಡೆಯಲು ಹೆಚ್ಚಿನ ಜನರಿಗೆ ಸ್ಥಳೀಯವಾಗಿ ನಿರಂತರ ಕೆಲಸ ಒದಗಿಸುವುದು ಅಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದ ಎಲ್ಲಾ ಜನರಿಗೆ ನಿರಂತರ ಉದ್ಯೋಗ ಒದಗಿಸಿ ಜೀವನ ಸಂಕಷ್ಟ ನೀಗಿಸುವ ಉದ್ದೇಶದಿಂದ ಜುಲೈ 01 ರಿಂದ ವಿಕಸಿತ ಗ್ರಾಮ ಪಂಚಾಯತಿಯಿಂದ ವಿಕಸಿತ ಭಾರತದೆಡೆಗೆ ಕಾರ್ಯಕ್ರಮಗಳನ್ನು ರಾಯಚೂರು ಜಿಲ್ಲಾ ಪಂಚಾಯತ್ ವಿನೂತನ ಐಇಸಿ ಚಟುವಟಿಕೆಗಳ ಮೂಲಕ ಅಭಿಯಾನವನ್ನು ಜಿಲ್ಲೆಯ 179




ಗ್ರಾಮ ಪಂಚಾಯತಿಗಳಲ್ಲಿ ಕೈಗೊಳ್ಳಲಾಗುತ್ತಿದೆ.

ಯೋಜನೆಯಡಿ 125 ದಿನಗಳ ಖಾತರಿಪಡಿಸಿದ ಉದ್ಯೋಗ, ಗಂಡು ಮತ್ತು ಹೆಣ್ಣಿಗೆ ಸಮಾನ ಅವಕಾಶ–ಸಮಾನ ಕೂಲಿ ಪ್ರತಿ ದಿನಕ್ಕೆ 382ರೂ.ಗಳು, ಗ್ರಾಮ ಸಭೆಯ ಮೂಲಕ ವಿಕಸಿತ ಗ್ರಾಮ ಪಂಚಾಯತ್ ಯೋಜನೆ, ನಿರುದ್ಯೋಗ ಭತ್ಯೆಗಾಗಿ ಬಲಿಷ್ಠ ನಿಯಮಗಳು, ಸಕಾಲಿಕ ಕೂಲಿ ಪಾವತಿ ಮತ್ತು ವಿಳಂಬ ಪರಿಹಾರ, ಗ್ರಾಮ ಸಭೆಯಿಂದ ವಿಕಸಿತ ಗ್ರಾಮ ಪಂಚಾಯತ್ ಯೋಜನೆ, ವಿಕಸಿತ ಗ್ರಾಮ ಪಂಚಾಯತಿಯಿಂದ ವಿಕಸಿತ ಭಾರತದೆಡೆಗೆ ತಂತ್ರಜ್ಞಾನದ ಮೂಲಕ ಸಬಲೀಕರಣ, ವಿ.ಜಿ.ಪಿ.ಪಿಯಲ್ಲಿ ವಿವಿಧ ಯೊಜನೆಗಳ ಒಗ್ಗೂಡಿಸುವಿಕೆ ವಿನೂತನ ಪ್ರಯತ್ನ ಮಾಡಲಾಗುತ್ತಿದೆ. ಪಾರದರ್ಶಕತೆ ಮತ್ತು ಹೊಣೆಗಾರಿಕೆಗಾಗಿ ತಂತ್ರಜ್ಞಾನದ ಬಳಕೆ: ಬಯೋಮೆಟ್ರಿಕ್ ದೃಢೀಕರಣ, ಮೊಬೈಲ್ ಆಧಾರಿತ ಮೇಲ್ವಿಚಾರಣೆ, ಜಿಯೋ–ಸ್ಪೇಷಿಯಲ್ ತಂತ್ರಜ್ಞಾನ ಆಧಾರಿತ ಯೋಜನೆ, ರಿಯಲ್–ಟೈಮ್ ಡ್ಯಾಶ್ ಬೋರ್ಡ್, ಎಐ ಆಧಾರಿತ ವಿಶ್ಲೇಷಣೆ, ನಾಗರಿಕ ಸಹಭಾಗಿತ್ವದ ವೇದಿಕೆ, ಗ್ರಾಮೀಣ ಆರ್ಥಿಕತೆಯ ಸಬಲೀಕರಣಕ್ಕೆ ಒತ್ತು, ಜಲಸಂರಕ್ಷಣೆ ಹಾಗೂ ಜಲ ಸಂಬಂಧಿತ ಕಾಮಗಾರಿಗಳಿಗೆ ಉತ್ತೇಜನ, ಜೀವನೋಪಾಯದ ಅವಕಾಶಗಳ ವಿಸ್ತರಣೆ, ಗ್ರಾಮೀಣ ಮೂಲಸೌಕರ್ಯಗಳ ಬಲವರ್ಧನೆ, ಅನೂಕೂಲಕರ ಸಾಮಾರ್ಥ್ಯದ ವಿಕಸನ ಮಾಡಲಾಗುವುದು. ಈ ಪ್ರಮುಖ ಕಾರ್ಯಗಳಿಗೆ ವಿಶೇಷ ಆದ್ಯತೆ: ಜಲಸಂರಕ್ಷಣೆ, ಅಂತರ್ಜಲ ಮರುಪೂರಣ, ಜಲಾನಯನ ಪ್ರದೇಶದ ಅಭಿವೃದ್ಧಿ, ನೀರಾವರಿ, ಜಲಮೂಲಗಳ ಪುನಶ್ಚೇತನ, ಅರಣ್ಯೀಕರಣಕ್ಕೆ ಆದ್ಯತೆ ನೀಡಲಾಗುವುದು. ಹವಾಮಾನ ಘಟನೆಗಳಿಂದ ರಕ್ಷಣೆಯ ಸಿದ್ಧತೆ: ಆಶ್ರಯ ಕೇಂದ್ರಗಳು, ತಟಬಂಧ/ನದಿ ಏರಿಗಳು, ಪ್ರವಾಹ ನಿರ್ವಹಣಾ ಮೂಲಸೌಕರ್ಯಗಳು, ಪುನರ್ವಸತಿ ಕಾರ್ಯಗಳು ಹಾಗೂ ಕಾಡ್ಗಿಚ್ಚು ನಿರ್ವಹಣೆಗಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ರಾಯಚೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕಾಂದೂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೇಮಕಾತಿ ಪ್ರಕಟಣೆ

**ಓಖಿಕಲ ನೇಮಕಾತಿ 2026 1 ಅಸೋಸಿಯೇಟ್ (ನಿವೃತ್ತ ಕಾರ್ಯನಿರ್ವಾಹಕ) ಹುದ್ದೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜುಲೈ 22, 2026**

ಓಖಿಕಲ ನೇಮಕಾತಿ 2026: 1 ಅಸೋಸಿಯೇಟ್ (ನಿವೃತ್ತ ಕಾರ್ಯನಿರ್ವಾಹಕ) ಹುದ್ದೆಗೆ ಅರ್ಜಿ ಸಲ್ಲಿಸಿ. ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ (ಓಖಿಕಲ), ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಅಸೋಸಿಯೇಟ್ (ನಿವೃತ್ತ ಕಾರ್ಯನಿರ್ವಾಹಕ) ಹುದ್ದೆಯನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ರಾಮ್‌ಗಢ (ಜಾರ್ಖಂಡ್) ಪ್ರದೇಶದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 27–ಜುಲೈ–2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: ntpc.co.in

# ಅವೈಜ್ಞಾನಿಕ ಚತುಷ್ಪಥ ರಸ್ತೆ ಕಾಮಗಾರಿ ಜು.29ರಂದು ಮಾನ್ವಿ ಬಂದ್‌ಗೆ ಕರೆ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಾನ್ವಿ ನಾಗರಿಕರ ಹಿತ ರಕ್ಷಣಾ ವೇದಿಕೆ ವತಿಯಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಸಂಚಾಲಕ ಹಾಗೂ ವಕೀಲ ಎನ್. ತಿಪ್ಪಣ್ಣ ಬಾಗಲವಾಡ, ಕಲ್ಮಲದಿಂದ ಸಿಂಧನೂರುವರೆಗೆ ಸುಮಾರು 1,700 ಕೋಟಿ ವೆಚ್ಚದಲ್ಲಿ KRDCL ವತಿಯಿಂದ ನಿರ್ಮಿಸಲಾಗುತ್ತಿರುವ ಚತುಷ್ಪಥ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿ ಇಲಾಖೆಯ ಡಿಪಿಆರ್ ನಿಯಮಗಳನ್ನು ಪಾಲಿಸದೆ, ಅವೈಜ್ಞಾನಿಕ ಹಾಗೂ ಕಳಪೆ ರೀತಿಯಲ್ಲಿ ನಡೆಯುತ್ತಿದೆ ಎಂದು ಆರೋಪಿಸಿದರು.**

ರಸ್ತೆಯ ಮಧ್ಯಭಾಗದಿಂದ ಎರಡೂ ಕಡೆ ನಿಗದಿತ ಅಗಲದಲ್ಲಿ ರಸ್ತೆ ನಿರ್ಮಾಣ ಮಾಡದೇ ರಸ್ತೆಯನ್ನು ಕಿರಿದಾಗಿಸಲಾಗಿದೆ. ಪಟ್ಟಣದ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸುವ ಸರ್ವಿಸ್ ರಸ್ತೆಯನ್ನು ನಿರ್ಮಿಸದೇ ಇರುವುದರಿಂದ ಅಪಘಾತಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ರಸ್ತೆ ಬದಿಯ ಚರಂಡಿಗಳನ್ನು ಅತೀ ಚಿಕ್ಕದಾಗಿ ನಿರ್ಮಿಸಿರುವುದರಿಂದ ಮಳೆ ನೀರು ಸರಾಗವಾಗಿ ಹರಿಯದೆ ಬಡಾವಣೆಗಳ



ಮನೆಗಳಿಗೆ ನುಗ್ಗುವ ಅಪಾಯವಿದೆ. ಅಲ್ಲದೆ, ಚರಂಡಿಗಳನ್ನು ರಾಜಕಾಲುವೆಗಳಿಗೆ ಸಂಪರ್ಕಿಸಿಲ್ಲ ಎಂದು ದೂರಿದರು.

ರಾಯಚೂರು ರಸ್ತೆಯ ಲಕ್ಷ್ಮೀ ದೇವಸ್ಥಾನದ ಬಳಿ ರಸ್ತೆ ತಿರುವಿನಲ್ಲಿ ಅಗಲವನ್ನು ಕಡಿಮೆ ಮಾಡಿರುವುದು ಹಾಗೂ ಪದಚಾರಿಗಳ ಅನುಕೂಲಕ್ಕಾಗಿ ಮೇಲ್ಸೇತುವೆ ನಿರ್ಮಿಸದಿರುವುದು ಅಪಘಾತಗಳಿಗೆ ಕಾರಣವಾಗಬಹುದು. ಕಾಮಗಾರಿ ನಿಯಮಾನುಸಾರ ನಡೆಯದಿದ್ದರೂ ಏಖಿಆಅಐ ಅಧಿಕಾರಿಗಳು ಪರಿಶೀಲನೆ ನಡೆಸದೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದರು. ಪಟ್ಟಣದ ಪ್ರವೇಶ ಭಾಗದಲ್ಲಿರುವ ಮೇಜರ್ ಶಾಹನವಾಜ್ ಖಾನ್ ವೃತ್ತ, ಡಾ. ಬಾಬು ಜಗಜೀವನ್ ರಾಮ್ ವೃತ್ತ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಶ್ರೀ ಬಸವೇಶ್ವರ ವೃತ್ತ, ಮಹಾತ್ಮ ಗಾಂಧಿ ವೃತ್ತ, ಛತ್ರಪತಿ ಶಿವಾಜಿ ವೃತ್ತ ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ವೃತ್ತ ಸೇರಿದಂತೆ ವಿವಿಧ ಮಹನೀಯರ ವೃತ್ತಗಳನ್ನು ಅಭಿವೃದ್ಧಿಪಡಿಸಿ ಕಂಚಿನ ಪುತ್ಥಳಿಗಳನ್ನು ಸ್ಥಾಪಿಸಬೇಕು. ಜೊತೆಗೆ ಅವೈಜ್ಞಾನಿಕ ರಸ್ತೆ ಕಾಮಗಾರಿಯನ್ನು ತಕ್ಷಣ ನಿಲ್ಲಿಸಿ ಅಗತ್ಯ ತಿದ್ದುಪಡಿಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಜುಲೈ 29ರಂದು ಮಾನ್ವಿ ನಾಗರಿಕರ ಹಿತ ರಕ್ಷಣಾ ವೇದಿಕೆ ನೇತೃತ್ವದಲ್ಲಿ ವಿವಿಧ ರಾಜಕೀಯ ಪಕ್ಷಗಳು, ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಯೋಗದೊಂದಿಗೆ "ಮಾನ್ವಿ ಬಂದ್" ಹಾಗೂ ರಸ್ತೆ ತಡೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಪ್ರಭುರಾಜ ಕೋಡ್ಲಿ, ಶೇಖ್ ಫರೀದ್ ಉಮ್ರಿ, ಕೆ. ನಾಗಲಿಂಗಸ್ವಾಮಿ, ಹರಿಹರ ಪಾಟೀಲ್, ಹೆಚ್. ದೇವರಾಜ್, ಸುಬಾನ್ ಬೇಗ್, ಡಿ. ಬಸವನಗೌಡ, ಶಿವರಾಜ್ ಜಾನೇಕಲ್, ಹನುಮಂತಕೋಟೆ, ಶಹನಾವಾಜ್, ಲಕ್ಷ್ಮಣ್ ಜಾನೇಕಲ್, ಶರಣು ಮುದ್ದಂಗುಂಡಿ, ನುಸರತ್, ಮೆಹಬೂಬ್ ಕುರೇಶಿ, ನಾಸೀರ್ ಅಲಿ ಕುರೇಶಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ತಾ.ಪಂ ಇಒ ಶಿವಾನಂದರಡ್ಡಿ ಕುಡಿಯುವ ನೀರಿನ ಕೆರೆಗಳಿಗೆ ಭೇಟಿ, ಪರಿಶೀಲನೆ

❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತುಂಗಭದ್ರಾ ಜಲಾಶಯದಿಂದ ಕುಡಿಯುವ ನೀರಿನ ಕೆರೆ ತುಂಬಿಸುವ ಉದ್ದೇಶದಿಂದ ತುಂಗಭದ್ರಾ ಎಡದಂಡೆ ನಾಲೆಗೆ ನೀರು ಹರಿಸುತ್ತಿರುವ ಹಿನ್ನಲೆಯಲ್ಲಿ ಗೌಡನಬಾವಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾಗರಕ್ಯಾಂಪ್, ಉದ್ಬಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಹುಲ್ಲೂರು, ವಟಗಲ್ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಸಾಪುರ ಮತ್ತು ಇರಕಲ್ ಕೆರೆಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದರಡ್ಡಿ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.**



ನಂತರ ಮಾತನಾಡಿದ ಅವರು, ತುಂಗಭದ್ರ ನಾಲೆಗೆ ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ನೀರು ಹರಿಸುತ್ತಿದ್ದು, ಕೃಷಿ ಚಟುವಟಿಕೆಗಳಿಗೆ ನೀರು ಬಳಸುವಂತಿಲ್ಲ. ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಪಾಳೆ ಪ್ರಕಾರ ಗ್ರಾಪಂ ಸಿಬ್ಬಂದಿ ನಿಯೋಜಿಸಿ ಕೆರೆಗಳನ್ನು ಭರ್ತಿ ಮಾಡಬೇಕು. ವಿದ್ಯುತ್ ಸಂಪರ್ಕ ಕಡಿತಗೊಂಡರೆ, ತಕ್ಷಣ ಜೆಸ್ಕಾಂ ಅಧಿಕಾರಿಗಳ ಗಮನಕ್ಕೆ ತರಬೇಕು. ಕೆರೆ ಭರ್ತಿಯಾದ ತಕ್ಷಣ ಹಳ್ಳಿಗಳಿಗೆ ನಿರಂತರವಾಗಿ ನೀರು ಪೂರೈಸುವ ಬದಲು, ನಿಯಮಿತವಾಗಿ ನೀರು ಸರಬರಾಜು ಮಾಡಿದರೆ, ನೀರಿನ ಉಳಿತಾಯವಾಗಲಿದೆ ಎಂದರು. ಈ ವೇಳೆ ವಟಗಲ್ ಗ್ರಾಪಂ ಅಧ್ಯಕ್ಷರಾದ ಬಸನಗೌಡ, ಗೌಡನಭಾವಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ವಸಂತಗೀತಾ, ಉದ್ಬಾಳ ಗ್ರಾಪಂಯ ಅಭಿವೃದ್ಧಿ ಅಧಿಕಾರಿ ಬಸವರಾಜ, ವಟಗಲ್ ಗ್ರಾಪಂ ಅಭಿವೃದ್ಧಿ ಅಧಿಕಾರಿ ತಿಮ್ಮನಗೌಡ ಸೇರಿದಂತೆ ಗ್ರಾ.ಪಂ ಸಿಬ್ಬಂದಿಗಳಿದ್ದರು.

## ಪಂಪ್‌ಸೆಟ್ ಚಾಲನೆ ಮಾಡಲು ಹೋಗಿ ವಿದ್ಯುತ್ ತಗುಲಿ –ವ್ಯಕ್ತಿ ಸಾವು

❏ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಸಮೀಪದ ಬಸಾಪೂರ ಗ್ರಾಮದಲ್ಲಿನ ಜಮೀನೊಂದರಲ್ಲಿ ಪಂಪ್‌ಸೆಟ್ ಚಾಲನೆ ಮಾಡಲು ಹೋಗಿ ವಿದ್ಯುತ್ ತಗುಲಿ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಇಂದು ನಡೆದಿದೆ.**



ಮೃತ ವ್ಯಕ್ತಿಯು ಅಮರೇಶ ತಂದೆ ಮಲ್ಲಪ್ಪ ಸಜ್ಜನ್ (42) ಎಂದು ತಿಳಿದು ಬಂದಿದ್ದು, ತಮ್ಮ ಜಮೀನಿನಲ್ಲಿ ಪಂಪ್‌ಸೆಟ್ ಚಾಲನೆ ಮಾಡಲು ಹೋದಾಗ ಮಳೆಬಂದ ಕಾರಣ ಆಕಸ್ಮಿಕವಾಗಿ ವಿದ್ಯುತ್ ತಗುಲಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಕವಿತಾಳ ಪೊಲೀಸ್ ಠಾಣೆ ಪಿಎಸ್‌ಐ ಗುರುಚಂದ್ರ ಯಾದವ್ ಭೇಟಿ ನೀಡಿ ಪರಿಶೀಲಿಸಿದ್ದು ಪ್ರಕರಣ ದಾಖಲಾಗಿದೆ.

ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮಸ್ಕಿಯಲ್ಲಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಸುದ್ದಿ ಗೋಷ್ಠಿ ಜುಲೈ 25–26 ರಂದು ಎಸ್‌ಐಆರ್ ಮಹಾ ಸಂಪರ್ಕ ಅಭಿಯಾನ: ಪ್ರತಾಪಗೌಡ




❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಆದೇಶ ಮೇರೆಗೆ ಜುಲೈ 25 ಮತ್ತು 26 ರಂದು ಎರಡು ದಿನಗಳ ಕಾಲ ಎಸ್‌ಐಆರ್ ಮಹಾ ಸಂಪರ್ಕ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಪಕ್ಷದ ಪ್ರಮುಖರು, ಪದಾಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಮನೆ ಮನೆ ಭೇಟಿಯ ಮೂಲಕ ಎಸ್‌ಐಆರ್ ಪ್ರಕ್ರಿಯೆಗೆ ವೇಗ ನೀಡುವ ಮನೆ ಮನೆ ಅಭಿಯಾನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಹೇಳಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ನಡೆದಿದ್ದು, ತಾಲೂಕಿನಲ್ಲಿ ಶೇ.80ರಷ್ಟು ಪ್ರಕ್ರಿಯೆ ಪೂರ್ಣಗೊಂಡಿದೆ. ಶೇ100% ಪೂರ್ಣಗೊಳಬೇಕಾಗಿದೆ. ಕ್ಷೇತ್ರದ ಒಟ್ಟು 2491400 ಮತದಾರರಿದ್ದು, ಅದರಲ್ಲಿ 8 ರಿಂದ 9 ಸಾವಿರ ಮತದಾರರು ಮರಣ ಹೊಂದಿರುವ ಪ್ರಕರಣಗಳಿವೆ. ಅನ್ಯ ನಗರ, ಪಟ್ಟಣಗಳಿಗೆ ಗುಳೆ ಹೋದಂತರನ್ನು ಪಕ್ಷದಿಂದ ನೇಮಿಸಿದ ಬಿಎಲ್‌ಒ2ಗಳು ಸಂಪರ್ಕಿಸಿ ಬಿಎಲ್‌ಒಗಳಿಗೆ ಮಾಹಿತಿ ನೀಡಿ ಎನ್‌ರೋಲ್ಮೆಂಟ್ ಮಾಡಿದ್ದಾರೆ.

ಆದ್ದರಿಂದ ಜುಲೈ 25 ಮತ್ತು 26 ರಂದು ಪಕ್ಷದಿಂದ ಹಮ್ಮಿಕೊಂಡಿರುವ ಎಸ್‌ಐಆರ್ ಮಹಾ ಸಂಪರ್ಕ ಅಭಿಯಾನವನ್ನು ಪಕ್ಷದ ಕಾರ್ಯಕರ್ತರು ಸುಮಾರು 20 ಮನೆಗಳಿಗೆ ಖುದ್ದಾಗಿ ಭೇಟಿ ನೀಡುವ ಮೂಲಕ ಪರಿಶೀಲನೆ ಮಾಡಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಬಸವಂತರಾಯ ಕುರಿ, ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಬಸವರಾಜ ವಕೀಲ ಡೋಣಮರಡಿ, ಡಾ.ಬಿ.ಹೆಚ್.ದಿವಟರ್ ಇದ್ದರು.

# ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ನೇರ ಸಾಲ ಯೋಜನೆಗೆ ಅರ್ಜಿ ಆಹ್ವಾನ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 23 (ಕರ್ನಾಟಕ ವಾರ್ತೆ): ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ವಿಪ್ರ ಸ್ವ–ಉದ್ಯಮ ನೇರ ಸಾಲ ಯೋಜನೆಯಡಿ 2026–27ನೇ ಸಾಲಿಗೆ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದವರು ಸ್ವಯಂ ಉದ್ಯೋಗಕೈಗೊಳ್ಳಲು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ವತಿಯಿಂದ ನೇರವಾಗಿ ಸಾಲ–ಸಹಾಯ ಧನ ಮಂಜೂರು ಮಾಡಲು ಉದ್ದೇಶಿಸಿದೆ. ಬ್ರಾಹ್ಮಣ ಸಮುದಾಯದ ಸಾಮಾನ್ಯ ವರ್ಗಕ್ಕೆ ಸೇರಿದ ಹಿಂದುಳಿದ ಬ್ರಾಹ್ಮಣ ಸಮುದಾಯದವರು ಸ್ವಯಂ ಉದ್ಯೋಗ ವೃತ್ತಿಗಳಾದ ಹಸು ಸಾಕಾಣಿಕೆ, ಗುಡಿಕೈಗಾರಿಕೆ, ಸಣ್ಣ ಕೈಗಾರಿಕೆ,




ಹೋಟೆಲ್ ಉದ್ಯಮ (ಕ್ಯಾಟರಿಂಗ್), ಅಂಗಡಿ, ಟೈಲರಿಂಗ್ ಹಾಗೂ ಟ್ಯಾಕ್ಸಿ ಇತ್ಯಾದಿ ಇತರೆ ಯಾವುದೇ ವ್ಯಾಪಾರ ವಹಿವಾಟುಗಳನ್ನು ಕೈಗೊಳ್ಳಲು ವಾರ್ಷಿಕವಾಗಿ ಶೇ.4% ದರದಲ್ಲಿ ಕನಿಷ್ಠ 1.00 ಲಕ್ಷ ರೂ. ಹಾಗೂ ಗರಿಷ್ಠ 2.00 ಲಕ್ಷ ರೂ.ಗಳ ಆರ್ಥಿಕ ನೆರವು ಮಂಜೂರು ಮಾಡಲಾಗುವುದು. ಸಾಲ ಸೌಲಭ್ಯವನ್ನು ಪಡೆಯಲು ಬೇಕಾದ ಅರ್ಹತೆಗಳು ಬ್ರಾಹ್ಮಣ ಸಮುದಾಯದ ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರಬೇಕು. ಅರ್ಜಿದಾರರು ಚಾಲ್ತಿಯಲ್ಲಿರುವ ಆರ್ಥಿಕವಾಗಿ ಹಿಂದುಳಿದ ಪ್ರಮಾಣ ಪತ್ರ (ಇಡಬ್ಲೂಎಸ್ ಪ್ರಮಾಣ ಪತ್ರ) ಹೊಂದಿರಬೇಕು. 8 ಲಕ್ಷ ಆದಾಯ ಮಿತಿ. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

ಅರ್ಜಿದಾರರ ವಯಸ್ಸು 18 ರಿಂದ 65 ವರ್ಷದ ಒಳಗಿನವರಾಗಿರಬೇಕು. ಒಂದು ಕುಟುಂಬದಿಂದ ಒಬ್ಬರು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಸಾಲದ ಉದ್ದೇಶವನ್ನು 10 ಪದಗಳಿಗಿಂತ ಕಡಿಮೆ ಇಲ್ಲದಂತೆ, ಸ್ಪಷ್ಟವಾಗಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಮಹಿಳೆಯರಿಗೆ 33%, ವಿಶೇಷಚೇತನರಿಗೆಶೇ 5% ಮೀಸಲಾತಿಯನ್ನು ನೀಡಲಾಗುವುದು. ಹಾಗೂ ಅರ್ಜಿದಾರರ ಆಧಾರ್ ಕಾರ್ಡ್ಗೆ ಮೊಬೈಲ್ ಸಂಖ್ಯೆ ಲಿಂಕ್ ಆಗಿರಬೇಕು.

ಮತ್ತು ಬ್ಯಾಂಕ್ ಖಾತೆ ಸೀಡ್ ಆಗಿರಬೇಕು. ಆಸಕ್ತರು 2026ರ ಆಗಸ್ಟ್ 31ರ ಸಂಜೆ 5.30ಗಂಟೆಯೊಳಗಾಗಿ ವೆಬ್‌ಸೈಟ್ ವಿಳಾಸ: www.ksbdb.karnataka.ಠಿಠಿ.ಟಿ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ: 8762249230/ 8029605888ಗೆ ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಕೌಶಲ್ಯ ಮಿಷನ್ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳಾದ ರಾಜಶೇಖರ್, ಪಾಟೀಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದದ್ದಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನೂತನ ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ದದ್ದಲ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಗುರುವಾರ ನಡೆಯಿತು.**

ಈ ಸಂಬಂಧ ಶಾಲೆಯಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಪಾಲಕರು, ಶಿಕ್ಷಣ ಪ್ರೇಮಿಗಳು ಹಾಗೂ ಗ್ರಾಮದ ಮುಖಂಡರು ಭಾಗವಹಿಸಿ ಚರ್ಚೆ ನಡೆಸಿದ ಬಳಿಕ ಚೀಟಿ ಆಯ್ಕೆ ಮೂಲಕ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ಚೀಟಿ ಆಯ್ಕೆ ಪ್ರಕ್ರಿಯೆಯಲ್ಲಿ ಚಿಕಟ್ನಿಕೊಲ್ ರಾಮೇಶ ನಾಯಕ ಅಧ್ಯಕ್ಷರಾಗಿ ಹಾಗೂ ನೀಲಮ್ಮ ಗಂಡ: ಕಾವಲಿ ಈರಣ್ಣ ನಾಯಕ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು ಎಂದು ಶಾಲೆಯ ಮುಖ್ಯಗುರು ದತ್ತಪ್ಪ ಅಲ್ಲೂರು ತಿಳಿಸಿದ್ದಾರೆ.



ಸದಸ್ಯರಾಗಿ ಸಣ್ಣ ವೀರೇಶ ಮದಕಲ್, ಗೌಡ್ರು ರಾಮ್, ಮದ್ರಿ ಸಣ್ಣ ಈರಪ್ಪ, ಕಾವಲಿ ತಿಮ್ಮಪ್ಪ, ಮಾರೆಣ್ಣ, ಮದ್ರಿ ರಾಮಯ್ಯ, ತಳವಾರ ಮೊಟ್ಲ ಸೀಕಲ್ ಯಾಕಪ್ಪ, ಎರೇಡ್ಡಿ ಹನುಮೇಶ, ಕಾವಲಿ ಹನುಮೇಶ, ಗೌಡ್ರು ಮಹಾದೇವ, ಅಗಸರ ಮಹಾದೇವ, ಮದ್ರಿ ಈರಪ್ಪ, ಸಾಧು ಹನುಮೇಶ, ಅಡಿವೇಶ ಮೊಟ್ಲ, ಹನುಮಯ್ಯ ಮೊಟ್ಲ ಹಾಗೂ ಎರೇಡ್ಡಿ ಮುದುಕ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹಿರಿಯ ಶಿಕ್ಷಕರಾದ ರಾಮೇಶ ದೇಸಾಯಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ದೇವೇಶ ನಾಯಕ ಜೈ, ವರದಿಗಾರ ಈರಪ್ಪ ದದ್ದಲ್, ದೊಡ್ಡ ದೇವಣ್ಣ, ಕಾವಲಿ ರಂಗಪ್ಪ, ದಸರಾ ಶಿವಪ್ಪ, ಶಾಲೆಯ ಮುಖ್ಯಗುರು ದತ್ತಪ್ಪ ಅಲ್ಲೂರು, ಹಿರಿಯ ಶಿಕ್ಷಕ ರಾಮೇಶ ದೇಸಾಯಿ, ಸಹ ಶಿಕ್ಷಕರಾದ ಮದ್ರಿ ಹನಮಂತ್ರಾಯ ದದ್ದಲ್, ಕೊರುವಯ್ಯ ಕೊರವಿ, ಸಹ ಶಿಕ್ಷಕಿ ಸಾವಿತ್ರಿ ದದ್ದಲ್, ಅಡುಗೆ ಸಿಬ್ಬಂದಿ, ಶಾಲೆಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಯುವಜನತೆಯಲ್ಲಿ ನಾಯಕತ್ವ ಗುಣ, ಸಮಾಜಮುಖಿ ಕಾರ್ಯಗಳ ಬಗ್ಗೆ ಜಾಗೃತಿ ಮೂಡಿಸುವುದೇ ಜೆಸಿಐ ಉದ್ದೇಶ : ಜೆಸಿ ಕೆ.ವಿ.ವಸಂತಕುಮಾರ್

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಯುವಜನತೆಯಲ್ಲಿ ನಾಯಕತ್ವ ಗುಣಗಳನ್ನು ಸಮಾಜಮುಖಿ ಕಾರ್ಯಗಳ ಬಗ್ಗೆ ಜಾಗೃತಿ ಮೂಡಿಸುವುದೇ ಜೆಸಿಐ ಸಂಸ್ಥೆಯ ಮೂಲ ಉದ್ದೇಶವಾಗಿದೆ ಎಂದು ಜೆಸಿಐ ಸಂಸ್ಥೆಯ ವಲಯ 14ರ ಪೂರ್ವಾಧ್ಯಕ್ಷರಾದ ಜೆಸಿ ಎಚ್ ಜಿ ಎಫ್ ಕೆವಿ ವಂಸತಕುಮಾರ್ ತಿಳಿಸಿದರು.**

ಅವರು ಗಂಗಾವತಿಯ ಆನೆಗುಂದಿ ರಸ್ತೆಯಲ್ಲಿರುವ ನೇಚರ್ ಟ್ರಯಾಲ್ಸ್ ರೆಸಾರ್ಟಿನಲ್ಲಿ ಜೆಚಿಐ ಅಲುಮ್ನಿ ಕ್ಲಬ್ ಕಂಪ್ಲಿ ರೀಜನ್ ಘಟಕ ಉದ್ಘಾಟನೆ ಮತ್ತು ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಬವನ್ನು ಉದ್ಘಾಟಿಸಿ ಮಾತನಾಡಿ, ಕಳೆದ 5 ದಶಕಗಳಿಂದ ಜೆಸಿಐ ಕಂಪ್ಲಿ ಘಟಕವು ಹತ್ತು ಹಲವಾರು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಜೆಸಿಐ ವಲಯ 14, 24 ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಖ್ಯಾತಿಯನ್ನು ಗಳಿಸಿದೆ. ಜೆಸಿಐ ಸಂಸ್ಥೆಯು 40 ವರ್ಷದ ವಯಸ್ಸಿನವರೆಗೂ ಸದಸ್ಯತ್ವನ್ನು ಪಡೆಯುತ್ತದೆ. ಜೇಸಿ ಸದಸ್ಯರು ಹಿರಿಯ ಸದಸ್ಯರಾಗಿರುತ್ತಾರೆ. ಆದರೆ ಒಮ್ಮೆ ಜೆಸಿ ಸದಸ್ಯರಾದ ಮೇಲೆ ಜೀವನ ಪೂರ್ತಿ




ಅವರು ಜೆಸಿ ಸದಸ್ಯರಾಗಿರಬೇಕು. ಅವರ ಅನುಭವ, ಸಮಾಜಮುಖಿ ಕೆಲಸಕಾರ್ಯಗಳು ಯುವ ಜನತೆಗೆ ಸ್ಫೂರ್ತಿಯಾಗಿರಬೇಕೆನ್ನುವ ನಿಟ್ಟಿನಲ್ಲಿ 2020ರಿಂದ ಎಸ್.ಎಂ.ಎ. ಅಂದರೆ ಸೀನಿಯರ್ ಮೆಂಬರ್ ಅಸೋಷಿಯನ್ ಜನ್ಮ ತಾಳಿತು.

ನಂತರ ಕಳೆದ ವರ್ಷದಿಂದ ಜೆಸಿಐ ಅಲುಮ್ನಿ ಕ್ಲಬ್ ರೀಜನ್ ಎಂದು ಜನ್ಮ ತಾಳಿದ್ದು, ಈ ಕ್ಲಬಗೆ 40 ವರ್ಷ ಮೇಲ್ಪಟ್ಟವರೆಲ್ಲಾ ಸದಸ್ಯರಾಗಬಹುದಾಗಿದ್ದು ನಿರಂತರವಾಗಿ ಸಮಾಜ ಸೇವೆಯಲ್ಲಿ ತೊಡಗಬಹುದಾಗಿದೆ ಎಂದ ಅವರು 1998ರಲ್ಲಿ ಜೆಸಿಐ ವಿಜಯನಗರ ಕಂಪ್ಲಿ ಹೆಸರಿನಲ್ಲಿ ಆರಂಭವಾಗಿ ಅಂದು ಜೆಸಿ ಡಿ.ಮೌನೇಶ್ ಅವರಿಗೆ ಪದಗ್ರಹಣ ಕಾರ್ಯಕ್ರಮದ ಪ್ರಮಾಣ ವಚನ ಬೋಧಿಸಲು ವಲಯ 14ರ ಅಧ್ಯಕ್ಷನಾಗಿ ಆಗಮಿಸಿದ್ದೆ. ಇಂದು ಜೆಸಿಐ ಅಲುಮ್ನಿ ಕ್ಲಬ್ ಕಂಪ್ಲಿ ರೀಜನ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಿ.ಮೌನೇಶ್ ಅವರ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಲು ಆಗಮಿಸಿರುವುದು ಕಾಕತಾಳಿಯವೆಂದು ಅಂದಿನ ದಿನಗಳನ್ನು ಹಾಗೂ ಅಂದಿನಿಂದ ಇಂದಿನವರೆಗೂ ಜೆಸಿಐ ಸಂಸ್ಥೆಯೊಂದಿಗೆ ಗುರುತಿಸಿಕೊಂಡಿರುವ ಕಂಪ್ಲಿಯ ಹಿರಿಯ ಜೆಸಿ ಸದಸ್ಯರನ್ನು ಸ್ಮರಿಸಿಕೊಂಡರು. ಸಂಸ್ಥೆಯಿಂದ ಸಣ್ಣ,ಪುಟ್ಟ ಕಾರ್ಯಕ್ರಮಗಳನ್ನು ಆಯೋಜಿಸದೇ ಪಟ್ಟಣಕ್ಕೆ, ಜನತೆಗೆ ಉಪಯೋಗವಾಗುವ ಸದಾ ಜನಮಾನಸದಲ್ಲಿ ಉಳಿಯುವಂತ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು ಎಂದರು.

ಜೆಸಿಐ ಅಲುಮ್ನಿ ಕ್ಲಬ್ ಕಂಪ್ಲಿ ರೀಜನ್ ಅಧ್ಯಕ್ಷರಾಗಿ ಪದಗ್ರಹಣ ಮಾಡಿದ ಜೆಸಿ ಡ.ಮೌನೇಶ್ ಮಾತನಾಡಿ ಕಳೆದ ಮೂರುವರೆ ದಶಕಗಳಿಂದ ಜೆಸಿಐ ಸಂಸ್ಥೆಯೊಂದಿಗೆ ಗುರುತಿಸಿಕೊಂಡಿರುವುದು ಸಮಾಜ ಮುಖಿ ಕೆಲಸಗಳನ್ನು ಮಾಡಲು, ಇದರೊಂದಿಗೆ ತಾವು ಬೆಳೆಯಲು ಅದ್ಭುತ ಅವಕಾಶಗಳನ್ನು ಕಲ್ಪಿಸಿದ್ದು, ಇಂತಹ ಅವಕಾಶ ಪುನಃ ಸಿಕ್ಕಿದ್ದು, ಪಟ್ಟಣದಲ್ಲಿ ಉತ್ತಮ ಕಾರ್ಯಗಳನ್ನು ಮಾಡುವುದಾಗಿ ತಿಳಿಸಿದರು. ಜೆಸಿಐ ಅಲುಮ್ನಿ ಕ್ಲಬ್ ವಲಯ ಚೇರಮನ್ ಜೆಸಿ ಪಿಡಿಎಂ ಮಾಹಬಲೇಶ್ವರ ಅವರು ನೂತನ ಅಧ್ಯಕ್ಷರಾದ ಜೆಸಿ ಡಿ.ಮೌನೇಶ್ ಅವರಿಗೆ ಪ್ರಮಾಣ ವಚನ ಬೋಧಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಸದಸ್ಯರಾದ ಜೆಸಿ ನಿರಂಜಗುಪ್ತ, ಜೆಸಿ ಎಸ್.ಎಂ.ನಾಗರಾಜಸ್ವಾಮಿ ಮಾತನಾಡಿ ನೂತನ ಅಧ್ಯಕ್ಷರನ್ನು ಹಾಗೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಸನ್ಮಾನಿಸಿ ಗೌರವಿಸಿದರು. ವಲಯ ಉಪಾಧ್ಯಕ್ಷರಾದ ಜೆಎಫ್ ಎಫ್ ಪಿಡಿಎಂ ಪ್ರಸದ್ ಗಡಾದ್ ನೂತನ ಪದಾಧಿಕಾರಿಗಳಿಗೆ ಜೆಸಿಐ ಪಿನ್ ಗಳನ್ನು ನೀಡಿ ಗೌರವಿಸಿದರು.

ಪದಗ್ರಹಣ ಸಮಾರಂಭದಲ್ಲಿ ಜೆಸಿಐ ಅಲುಮ್ನಿ ಕ್ಲಬ್ ಪದಾಧಿಕಾರಿಗಳಾದ ಶಾಂತಿಲಾಲ್, ಸಿಂಘ್ವಿ, ರಮೇಶ್ ರೆಡ್ಡಿ, ಮಾಧುಸ್ವಾಮಿ, ಕೊಟ್ಯಾನ್, ಪೂರ್ಣಿಮಾ, ದಿವ್ಯಾ, ಹಿರಿಯ ಸದಸ್ಯರಾದ ಡಾ.ಜಂಬುನಾಥಗೌಡ,ರಾಮರಾಜು, ಡಾ.ಸುಧಾಕರ್, ಕೆ.ಎಂ.ವಾಗಿಶ್, ರುದ್ರಪ್ಪ, ರಾಘವೇಂದ್ರ, ಡಾ.ಭರತ್ ಪದ್ಮಶಾಲಿ, ಮಂಜೇಶ್, ಹಗರಿಬೊಮ್ಮನಹಳ್ಳಿಯ ರಾಘವೇಂದ್ರ, ಜೆಸಿ ಬ್ರಹ್ಮಾನಂದಾ, ಜೆಸಿ ಜಿ.ಚಂದ್ರಶೇಖರಗೌಡ, ಡಿ.ಮಂಜೇಶ್, ಮಹಿಳಾ ಸದಸ್ಯರಾದ ಡಿ.ವೀಣಾ ಮೌನೇಶ, ಚೈತ್ರ ಪ್ರಸಾದ ಗಡಾದ್, ಸುನಿತಾ, ಕಾಂಚನಾ ಸೇರಿದಂತೆ ಇತರರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಫ್ಯಾಷನ್ ಡಿಸೈನಿಂಗ್ (Fashion Designing)

ಫ್ಯಾಷನ್ ಡಿಸೈನಿಂಗ್ ಕೋರ್ಸ್ ಬಟ್ಟೆಗಳು, ಆಭರಣಗಳು ಮತ್ತು ಇತರೆ ವಿನ್ಯಾಸಗಳನ್ನು ರಚಿಸುವುದನ್ನು ಕಲಿಸುತ್ತದೆ. ಇದರಲ್ಲಿ ಡಿಪ್ಲೊಮಾ, ಪದವಿ (B.Sc / B.Des) ಮತ್ತು ಪ್ರಮಾಣಪತ್ರ ಕೋರ್ಸ್‌ಗಳು ಲಭ್ಯವಿವೆ.ಕೋರ್ಸ್ ವಿಧಗಳು ಮತ್ತು ಅವಧಿಪದವಿ ಕೋರ್ಸ್‌ಗಳು (Degree): B.Sc ಅಥವಾ B.Des ಫ್ಯಾಷನ್ ಡಿಸೈನಿಂಗ್ 3 ರಿಂದ 4 ವರ್ಷಗಳ ಅವಧಿಯದ್ದಾಗಿರುತ್ತದೆ. 12ನೇ ತರಗತಿ (PUC) ಮುಗಿದ ನಂತರ ಸೇರಬಹುದು.ಡಿಪ್ಲೊಮಾ ಕೋರ್ಸ್‌ಗಳು (Diploma): 1 ರಿಂದ 2 ವರ್ಷಗಳ ಅವಧಿಯ ಡಿಪ್ಲೊಮಾ ಅಥವಾ ಪಿಜಿ ಡಿಪ್ಲೊಮಾ ಕೋರ್ಸ್‌ಗಳು ಇರುತ್ತವೆ.ಸರ್ಟಿಫಿಕೇಟ್ ಕೋರ್ಸ್‌ಗಳು: 3 ತಿಂಗಳಿಂದ 1 ವರ್ಷದವರೆಗೆ ಅಲ್ಪಾವಧಿಯ ತರಬೇತಿ ಲಭ್ಯವಿದೆ.ಅರ್ಹತೆ ಮತ್ತು ಕೌಶಲ್ಯಗಳುಅರ್ಹತೆ: ಯಾವುದೇ ಸ್ಟ್ರೀಮ್‌ನಲ್ಲಿ 12ನೇ ತರಗತಿ (PUC) ಅಥವಾ ತತ್ಸಮಾನ ಪರೀಕ್ಷೆ ಉತ್ತೀರ್ಣರಾಗಿರಬೇಕು.ಕಲಿಯುವ ಮುಖ್ಯ ವಿಷಯಗಳು: ಸ್ಕೆಚಿಂಗ್ (Sketching), ಬಟ್ಟೆಯ ಆಯ್ಕೆ (Fabric selection), ಹೊಲಿಗೆ ಮತ್ತು ಗಾರ್ಮೆಂಟ್ ನಿರ್ಮಾಣ (Garment construction) ಹಾಗೂ ಮಾರುಕಟ್ಟೆ ಪ್ರವೃತ್ತಿಗಳು (Market trends).ವೃತ್ತಿ ಅವಕಾಶಗಳುಸ್ವಂತ ಬುಟಿಕ್ ಅಥವಾ ಉದ್ಯೋಗ ಪ್ರಾರಂಭಿಸಬಹುದು.ಫ್ಯಾಷನ್ ಡಿಸೈನರ್, ಸ್ಟೈಲಿಸ್ಟ್ ಅಥವಾ ಮರ್ಚಂಡೈಸರ್ ಆಗಿ ಕೆಲಸ ಮಾಡಬಹುದು.

## ಅನರ್ಹರನ್ನು ಕೈ ಬಿಟ್ಟು, ಅರ್ಹ ಮತದಾರರಿಗೆ ಪಟ್ಟಿಯಲ್ಲಿರಿಸಿ: ಸಿದ್ರಾಮೇಶ ಮನ್ನಾಪೂರು

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ರಾಷ್ಟ್ರೀಯ ಚುನಾವಣೆ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಸ್ವಾಗತಾರ್ಹ, ಅಧಿಕಾರಿಗಳು ಅರ್ಹ ಮತದಾರರಿಗೆ ಅವಕಾಶ ಕೊಡಿ, ಅನರ್ಹ ಮತದಾರರನ್ನು ಮತದಾರ ಪಟ್ಟಿಯಿಂದ ಕೈಬಿಡಿ ಎಂದು ಸಿಂಧನೂರು ಬಿಜೆಪಿ ನಗರ ಮಂಡಲ ಅಧ್ಯಕ್ಷರಾದ ಸಿದ್ರಾಮೇಶ ಮನ್ನಾಪೂರು ತಿಳಿಸಿದರು.




ಗುರುವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜೂನ್ 30 ರಿಂದ ಪ್ರಾರಂಭವಾದ ಎಸ್.ಐ.ಆರ್ ಪ್ರಕ್ರಿಯೆ ಅಗಸ್ಟ್ 8ರಂದು ಪೂರ್ಣಗೊಳ್ಳಲಿದ್ದು,ಎನೂಮರೇಶನ್ ಅರ್ಜಿ ಪಡೆದು ಸರಿಯಾಗಿ ತುಂಬಿ ಮರಳಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಲುಪಿಸಿ, ಕೇವಲ ಅರ್ಜಿ ಪಡೆದು ತಮ್ಮಲ್ಲಿಯೇ ಇಟ್ಟುಕೊಳ್ಳಬೇಡಿ ಎಂದು ಮನವಿ ಮಾಡಿದರು. ಮಾಜಿ ಸಂಸದರಾದ ಕೆ.ವಿರುಪಾಕ್ಷಪ್ಪ, ಮುಖಂಡ ಕೆ. ಕರಿಯಪ್ಪ ಸೇರಿದಂತೆ ಬಿಜೆಪಿ ನಾಯಕರು ಕಾರ್ಯಕರ್ತರು, ಬಿಎಲ್.ಎ ಗಳು ಜುಲೈ 25 ಮತ್ತು 26 ರಂದು ಪ್ರತಿ ಮನೆಗೆ ತೆರಳಿ 'ಸಂಪರ್ಕ ಅಭಿಯಾನ' ನಡೆಸಿ ಮತದಾನದ ಮಹತ್ವ ತಿಳಿಸುವ ಕೆಲಸವನ್ನು ಮಾಡಲಾಗುತ್ತದೆ. ಕೆಲವು ಕಡೆ ಎನೂಮರೇಶನ್ ಅರ್ಜಿಯನ್ನು ವಿತರಣೆ ಮಾಡದೆ ತಮ್ಮಲ್ಲಿಯೇ ಇಟ್ಟುಕೊಂಡಿದ್ದಾರೆ. ಕೂಡಲೇ ಅರ್ಜಿಗಳನ್ನು ವಿತರಣೆ ಮಾಡಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ: ಮುಖಂಡ ಕೆ.ರಾಜಶೇಖರ ಬಿಎಲ್.ಎ ಸಿದ್ದಲಿಂಗಯ್ಯ ಸ್ವಾಮಿ, ಗ್ರಾಮೀಣ ಮಂಡಲ ಅಧ್ಯಕ್ಷ ಯಂಕೋಬ ನಾಯಕ, ಯುವ ಘಟಕದ ಅಧ್ಯಕ್ಷ ಮುತ್ತು ಬರ್ಸಿ, ರವಿ ಉಪ್ಪಾರ, ಮಲ್ಲಯ್ಯ, ರಾಮಕೃಷ್ಣ, ರಮೇಶ, ನಿರುಪಾದಿ, ಚಿದಾನಂದ ಸೇರಿದಂತೆ ಅನೇಕರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಆ.9ರಂದು ಅಖಿಲಾಂಡ ಶ್ರೀಮಹರ್ಷಿ ವಾಲ್ಮೀಕಿ ನಾಯಕ ಸಂಘದಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಅಖಿಲಾಂಡ ಶ್ರೀ ಮಹರ್ಷಿ ವಾಲ್ಮೀಕಿ ನಾಯಕ ಸಂಘ ರಾಯಚೂರು ವತಿಯಿಂದ ಆಗಸ್ಟ್ 9 ರಂದು ಜಿಲ್ಲೆಯ ವಾಲ್ಮೀಕಿ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ರಾಯಚೂರಿನ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಮೌನೇಶ ನಾಯಕ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿಂಧನೂರು ತಾಲೂಕಿನ ನಾಯಕ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಎಸ್‌ಎಸ್‌ಎಲ್.ಸಿ ಮತ್ತು ಪಿಯುಸಿಯಲ್ಲಿ ಶೇ.90 ಅಂಕಗಳು ಪಡೆದ ಮಕ್ಕಳು ಜು.30 ರೊಳಗೆ ತಮ್ಮ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಹಾಗೂ 3 ಪೋಟೋಗಳ ಸಮೇತ ಈ ಎಲ್ಲಾ ದಾಖಲಾತಿಗಳನ್ನು




ತಾಲೂಕು ಅಧ್ಯಕ್ಷ ಮೌನೇಶ ಅವರ ಮೊಬೈಲ್ ನಂ- 8105288999, ಉಪಾಧ್ಯಕ್ಷ ಯಂಕೋಬ ಜವಳಗೇರಾ, 8296812883, ಹಾಗೂ ಕಾರ್ಯಾಧ್ಯಕ್ಷ ನಾರಾಯಣಸ್ವಾಮಿ 9972987675, ಪ್ರಧಾನ ಕಾರ್ಯದರ್ಶಿ ರಮೇಶ ನಾಯಕ ಬೆಳಗುರ್ಕಿ 8722824422, ಇವರನ್ನು ಸಂಪರ್ಕಿಸಲು ತಿಳಿಸಿದರು.

ಪ್ರತಿಭಾ ಪುರಸ್ಕಾರ ಮುಗಿದ ನಂತರ ಸಂಜೆಯ ವೇಳೆ ಸಮಾಜದ ಹಿರಿಯ ಮುಖಂಡರು ಹಾಗೂ ಮಾಜಿ ಸಚಿವರಾದ ವಿ.ಎಸ್.ಉಗ್ರಪ್ಪ ಸಂಸದರು, ಶಾಸಕರು, ನಿವೃತ್ತ ಅಧಿಕಾರಿಗಳ ಜೊತೆಗೆ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪರಿಶಿಷ್ಟ ಪಂಗಡಕ್ಕೆ ಶೇ.7 ರಷ್ಟು ಮೀಸಲಾತಿ ನಿಗದಿ ಮಾಡಲು 9 ಸೆಡ್ಯೂಲ್ ಗೆ ಸೇರ್ಪಡೆ ಮಾಡುವುದರ ಕುರಿತು ಸಾಧಕ-ಭಾದಕಗಳ ಬಗ್ಗೆ ಚರ್ಚಿಸಲಾಗುವುದು ಈ ಕಾರ್ಯಕ್ರಮಕ್ಕೆ ತಾಲೂಕಿನ ವಾಲ್ಮೀಕಿ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಮನವಿ ಮಾಡಿದರು.

ಈ ಸಂದರ್ಭದಲ್ಲಿ: ಉಪಾಧ್ಯಕ್ಷ ಯಂಕೋಬ ನಾಯಕ ಜವಳಗೇರಾ, ಪ್ರಧಾನ ಕಾರ್ಯದರ್ಶಿ ರಮೇಶ ನಾಯಕ ಬೆಳಗುರ್ಕಿ, ನಾರಾಯಣಸ್ವಾಮಿ ದುಮತಿ ಕಾರ್ಯಾಧ್ಯಕ್ಷರು, ಹಿರಿಯ ಸಲಹೆಗಾರ ಚನ್ನಪ್ಪ ನಾಯಕ ಇದ್ದರು.

# ಸ್ವಯಂ ಪ್ರೇರಿತ ರಕ್ತದಾನ ಶಿಬಿರ

## ಒಬ್ಬ ವ್ಯಕ್ತಿಯ ಜೀವ ಉಳಿಸುವ ರಕ್ತವನ್ನು ದಾನ ಮಾಡುವದು ಪ್ರತಿಯೊಬ್ಬರ ರೂಡಿಯಾಗಲಿ: ಡಾ ನಂದಿತಾ ಎಮ್ ಎನ್.




❏ ನೈಜ್ಯ ದೆಸೆ ನ್ಯೂಸ್

ಪ್ರತಿಯೊಬ್ಬರ ಜೀವನದಲ್ಲಿ ಆಕಸ್ಮಿಕ ಘಟನೆಗಳಿಂದ ಅಥವಾ ಗರ್ಭಿಣಿಯರಿಗೆ, ರಕ್ತಹೀನತೆಯಿಂದ ಬಳಲುವವರಿಗೆ ರಕ್ತದ ಅವಶ್ಯಕತೆಯ ಸಂದರ್ಭದಲ್ಲಿ ದಾನಿಗಳಿಂದ ರಕ್ತವನ್ನು ತಕ್ಷಣದಲ್ಲಿ ಪಡೆಯಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತ ರಕ್ತದಾನದ ಮೂಲಕ ಅಮೂಲ್ಯ ಜೀವವನ್ನು ಉಳಿಸುವ ಪುಣ್ಯದ ಕಾರ್ಯಕ್ಕೆ ಪ್ರತಿಯೊಬ್ಬರೂ ಕೈಜೊಡಿಸಲು ಮುಂದೆ ಬನ್ನಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ವಿನಂತಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕ ಆರೋಗ್ಯ ಅಧಿಕಾರಿಗಳ ಕಛೇರಿ, ರಿಮ್ಸ್ ಆಸ್ಪತ್ರೆ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಜಹೀರಬಾದ್ ಸಂಯುಕ್ತಾಶ್ರಯದಲ್ಲಿ ರಕ್ತದಾನ ಶಿಬಿರದಲ್ಲಿ ಮಾತನಾಡಿ, ಗರ್ಭಿಣಿಯರಿಗೆ ಹೆರಿಗೆ ಅವಧಿಯಲ್ಲಿ ಹಾಗೂ ಥಲಸೀಮಿಯಾದಂತ ಖಾಯಿಲೆಗಳಿಗೆ, ಅಪಘಾತದ ಸಮಯದಲ್ಲಿ ಹಾಗೂ ರಕ್ತಹೀನತೆಯಿಂದ ಬಳಲುವವರಿಗೆ, ಕ್ಯಾನ್ಸರ್ ನಂತ ಕಾಯಿಲೆಗಳಿಂದ ಬಳಲುವವರಿಗೆ, ರಕ್ತದ ಅವಶ್ಯಕತೆ ಇದೆ. ರಕ್ತದಾನದಿಂದ ಹೊಸ ರಕ್ತ ಉತ್ಪತ್ತಿಯಾಗಿ, ಹೃದಯಾಘಾತ, ರಕ್ತದೊತ್ತಡ, ಸಕ್ಕರೆ ಕಾಯಿಲೆಯಂತಹ ರೋಗಗಳು ದೂರವಾಗುತ್ತವೆ ಎಂದು ತಿಳಿಸಿದರು.

ಸ್ಥಳೀಯ ಮುಖಂಡರಾದ ರವಿಂದ್ರ ಜಲ್ದಾರ್ ಮಾತನಾಡಿ ಆರೋಗ್ಯ ಇಲಾಖೆಯು ಇಂದು ಪ್ರತಿಯೊಬ್ಬ ವ್ಯಕ್ತಿಯ ಖಾಳಜಿಗಾಗಿ ಹಗಲಿರಳು ಶ್ರಮಿಸುತ್ತಿದ್ದು, ಯುವಜನತೆ ದುಶ್ಚಟಗಳಿಂದ ದೂರವಿದ್ದು, ಇನ್ನೊಬ್ಬರ ಜೀವ ಉಳಿಸುವ ಹಾಗೂ ರಕ್ತದಾನದಿಂದ ಹೊಸ ಚೈತನ್ಯ, ಉಲ್ಲಾಸ ಕಂಡು ಬರುವುದರಿಂದ ಯುವಕರು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿ ಇನ್ನೊಬ್ಬರ ಜೀವ ಉಳಿಸುವ ಕಾರ್ಯಕ್ಕೆ ಕೈ ಜೊಡಿಸಲು ಮನವಿ ಮಾಡಿದರು.

ಮಹಿಳೆಯರು ಸೇರಿದಂತೆ 19 ಜನ ದಾನಿಗಳು ರಕ್ತದಾನ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಹಾಗೂ ಡ್ಯಾಪ್ಕೋ ಅಧಿಕಾರಿ ಡಾ ಯಶೋಧ, ರಿಮ್ಸ್ ರಕ್ತಬ್ಯಾಂಕ್ ವೈದ್ಯಾಧಿಕಾರಿ ಡಾ ಎಹಮದ್ ಹುಸೇನ್, ಜಹೀರಬಾದ್ ನಗರ ಪ್ರಾ.ಆ ಕೇಂದ್ರದ ವೈದ್ಯಾಧಿಕಾರಿ ಡಾ ಶ್ವೇತಾಂಬರಿ, ದಂತ ವೈದ್ಯರಾದ ಡಾ ಪೌಜಿಯಾ ಪರ್ವಿನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜ ಕೆ, ಲೋಕೇಶ ಡಿಡಿಎಮ್. ಗುರು ಗಂಪಾ ಎಮ್ ಆಂಡ್ ಇ, ತಾಲೂಕ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸುರೇಶ ಭಂಡಾರಿ, ಎಮ್.ಟಿ.ಎಸ್ ಸಂಧ್ಯಾ, ಹೆಚ್‌ಐಓ ಶೃತಿ, ಬಾಚಯ್ಯ ಶುಶ್ರೂಷಣಾಧಿಕಾರಿ ಆರತಿ, ಸುವರ್ಣ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ, ಶಾರದಾ, ಮಲ್ಲೇಶ್ವರಿ, ಮಹೇಶ್ವರಿ, ಶಶಿಕಲಾ, ಪ್ರಯೋಗ ಶಾಲಾ ತಂತ್ರಜ್ಞರು ಅತಾವುಲ್ಲಾ, ಫಾರ್ಮಸಿ ಅಧಿಕಾರಿ ಶಬನಮ್, ಎಲ್‌ಡಿಸಿ ನರಸಿಂಹಲು, ಮಲೇರಿಯಾ ಲಿಂಕ್ ವರ್ಕರ್ ಅನಂತ ಕುಮಾರ ನಾಯಕ, ರಿಮ್ಸ್ ರಕ್ತಬ್ಯಾಂಕ್‌ನ ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು, ಸಾರ್ವಜನಿಕರು ಉಪಸ್ಥಿತರಿದ್ದರು.

## ಜು.26ರಿಂದ ಎಮ್ಮಿಗನೂರು ಗ್ರಾಮದಲ್ಲಿ ಸಾಮರಸ್ಯದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಧರ್ಮದ ಭೌತಕ ಲಾಂಚನಗಳಿಂದ ಎಲ್ಲರೂ ಒಂದಾಗದಿದ್ದರೂ, ಗಿಡ ಮರಗಳನ್ನು ಬೆಳೆಸುವ ಮೂಲಕ ಹಾಳಾಗುತ್ತಿರುವ ಪರಿಸರವನ್ನು ಉಳಿಸುವ, ಪ್ರೀತಿಸುವ ಮೂಲಕ ಎಲ್ಲರೂ ಒಂದಾಗೋಣ, ಈ ನಿಟ್ಟಿನಲ್ಲಿ ಶ್ರೀಮಠದಲ್ಲಿ ಜು. 26 ರಿಂದ ಜು.31ರವರೆಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಎಮ್ಮಿಗನೂರು ಹಂಪಿ ಸಾವಿರದೇವರು ಶ್ರೀಗುರು ಮಹಾಂತರ ಮಠದ ಪೀಠಾಧಿಪತಿಗಳಾದ ಶ್ರ ಷ.ಬ್ರ. ಶ್ರೀಗುರು ವಾಮದೇವ ಮಹಾಂತ ಶಿವಾಚಾರ್ಯ ಶ್ರೀಗಳು ತಿಳಿಸಿದರು.

ಅವರು ಎಮ್ಮಿಗನೂರು ಗ್ರಾಮದ ಶ್ರೀಮಠದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ ಶ್ರೀಮಠದ ಲಿಂ ಶ್ರೀ.ಷ.ಬ್ರ. ಶ್ರೀಗುರುಸಿದ್ದಲಿಂಗಮಹಾತ ರಾಜದೇಶೀಕೇಂದ್ರ ಶೀವಾಚಾರ್ಯ ರಾಜಗುರುಗಳ ಲಿಂಗಾಂಗ ಸಾಮರಸ್ಯದ 25ನೇ ಪುಣ್ಯ ಸ್ಮರಣೋತ್ಸವ, ಶ್ರೀಮಠದಮಹಾದ್ವಾರ ಉದ್ಘಾಟನೆ, ಪ್ರತಿಭಾ ಪುರಸ್ಕಾರ , ಗುರುವಂದನ, ವೈದ್ಯದೇವೋಭವ, ದೇಶಸೇವೆ, ಈಶಸೇವೆ, ಕೃಷಿಸೇವೆ, ತುಲಾಬಾರ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಶ್ರೀಮಠದ ಆವರಣದೊಳಗೆ ಜು.26ರಂದು ಬೆಳಿಗ್ಗೆ ಧ್ವಜಾರೋಹಣದೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿದ್ದು, ಅಂದು ಸಂಜೆ 6-45ಕ್ಕೆ ಸಿದ್ಧಾಂತ ಶಿಖಾಮಣಿ ಪ್ರವಚನ ಹಾಗೂ ಭಾವೈಕ್ಯ ಚಕ್ರವರ್ತಿ ಸಂತ ಶಿಶುನಾಳ ಷರಿಫರ ಹಾಗೂ ಆದ್ಯಾತ್ಮಿಕ ಕಾರ್ಯಕ್ರಮಗಳು ಆರಂಭವಾಗಲಿವೆ.



ಮಸ್ಕಿಯ ಗಚ್ಚಿನಮಠದ ಷ.ಬ್ರ. ವರರುದ್ರಮುನಿ ಶೀವಾಚಾರ್ಯರು ಸಿದ್ಧಾಂತ ಶಿಖಾಮಣಿ ಪ್ರವಚನ ಮತ್ತು ಬಸವನಬಾಗೇವಾಡಿ ಹಿರೇಮಠದ ಪ್ರವಚನ ಭಅಸ್ಕರ ಷ.ಬ್ರ. ಶಿವ ಪ್ರಕಾಶ ಶಿವಾಚಾರ್ಯರು ಶಿಶುನಾಳ ಷರಿಫರ ಪುರಾಣ ಪ್ರವಚನ ನಡೆಸಿಕೊಡಲಿದ್ದು, ತಾಳಿಕೋಟೆಯ ಪರಶುರಾಮ ಚಟ್ನಳ್ಳಿ ಸಂಗೀತ ಸೇವೆ ಮತ್ತು ತಾಳಿಕೋಟೆಯ ಯಲ್ಲಪ್ಪ ಗುಂಡಳ್ಳಿ ತಬಲಾ ಸೇವೆಯನ್ನು ನೀಡಲಿದ್ದಾರೆ. ಜು.28ರಂದು ವೈದ್ಯದೇವೋಭವ ಕಾರ್ಯಕ್ರಮದಡಿಯಲ್ಲಿ ಪ್ರಖ್ಯಾತ ವೈದ್ಯರನ್ನು ಸ್ಮರಿಸುವ ಮೂಲಕ ಗೌರವ ಸಮರ್ಪಣೆ ನಡೆಯಲಿದೆ. ಜು.29ರಂದು ಗುರುಪೌರ್ಣಿಮೆ,ಗುರುವಂದನ ಹಾಗೂ ತುಲಾಭಾರ ಕಾರ್ಯಕ್ರಮ ನಡೆಯಲಿದೆ.ಈ ಕಾರ್ಯಕ್ರಮದಲ್ಲಿ ವಿವಿಧ ಸ್ವಾಮೀಜಿಗಳಿಗೆ ಈಶಸೇವೆ ತುಲಾಭಾರ, ನಿವೃತ್ತ ಸೈನಿಕರಿಗೆ ದೇಶಸೇವೆ ತುಲಾಭಾರ ಮತ್ತು ಋಷಿ ಕೃಷಿ ಸೇವೆ ಯಲ್ಲಿ ವೇದಮೂರ್ತಿ ಪಂಪಾಪತಿ ಶಾಸ್ತ್ರಿಗಳಿಗೆ ಹಾಗೂ ಪ್ರಗತಿಪರ ರೈತರಿಗೆ ತುಲಾಭಾರ ಕಾರ್ಯಕ್ರಮಗಳು ಹಾಗೂ ಶ್ರೀಮಠದ ವಾಮದೇವ ಮಹಾಂತ ಶಿವಾಚಾರ್ಯರಿಗೆ ವಿಶೇಷ ತುಲಾಭಾರ ಕಾರ್ಯಕ್ರಮಗಳು ಜರುಗಲಿವೆ. ಜು.30ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದ್ದು ಇದರಲ್ಲಿ ತಾಲ್ಲೂಕಿನಲ್ಲಿ ಹತ್ತನೇ ತರಗತಿ, ದ್ವಿತೀಯ ಪಿಯುಸಿ ಹಾಗೂ ಪದವಿ ತರಗತಿಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಿದ್ದಾರೆ. ಜು.31ರಂದು ಕತೃಗದ್ದುಗೆಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಪುರಾಣ ಮಹಾಮಂಗಳ ಹಾಗೂ ಮಹಾ ಪ್ರಸಾದ ವಿತರಣೆ ನಡೆಯಲಿದೆ ಎಂದು ತಿಳಿಸಿದ ಅವರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಶಾಸಕರು, ಸಂಸದರು, ಸಚಿವರು, ಹಾಲಿ,ಮಾಜಿ ಜನಪ್ರತಿನಿಧಿಗಳು, ನಾಡಿನ ವಿವಿಧ ಮೂಲೆಗಳಿಂದ ಹರಗುರು ಚರಮೂರ್ತಿಗಳು, ಅಧಿಕಾರಿಗಳು ಭಾಗವಹಿಸಲಿದ್ದು, ತಾಲ್ಲೂಕು ಮತ್ತು ಜಿಲ್ಲೆಯ ಎಲ್ಲಾ ಧರ್ಮಾಭಿಮಾನಿಗಳು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

## ನನ್ನೆಲ್ಲಾ ಸೇವಾ ಕಾರ್ಯಗಳಿಗೆ ಮಹಾಲಿಂಗ ಮಹಾಸ್ವಾಮಿಗಳ ಆಶೀರ್ವಾದವೇ ಸ್ಫೂರ್ತಿ- ಡಾ. ಚನ್ನಬಸವ ಸ್ವಾಮಿ ಹಿರೇಮಠ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ನಮ್ಮ ಕರುನಾಡಿನ ಕಾರುಣ್ಯ ಮೂರ್ತಿಗಳಾದ ಯದ್ದಲದೊಡ್ಡಿಯ ಸುವರ್ಣ ಗಿರಿ ವಿರಕ್ತಮಠದ ಪರಮ ಪೂಜ್ಯ ಶ್ರೀ ಮ. ನಿ. ಪ್ರ ಮಹಾಲಿಂಗ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಕೀರ್ತಿ ಬಸವರಾಜ ಗಿರಡ್ಡಿ ಸಾ. ಕೋಳಬಾಳ ಈ ದಂಪತಿಗಳ ಅವಳಿ ಜವಳಿ ಮಕ್ಕಳಾದ ಸಮೃದ್ಧಿ ಹಾಗೂ ಸಂಸ್ಕೃತಿ ಮತ್ತು ಶೋಭಾ ಬಸವರಾಜ ಪಾಟೀಲ್ ಸಾ. ಬನ್ನಿಗನೂರು ಈ ದಂಪತಿಗಳ ಮಗಳಾದ ಖುಷಿ ಪಾಟೀಲ್ ಮತ್ತು ಸೂರ್ಯ ಭವಾನಿ ಶಿವಾಜಿ ನೆಕ್ಕಂಟಿ ಸಾ. ಅರಗಿನ ಮರ ಕ್ಯಾಂಪ್

ಈ ದಂಪತಿಗಳ ಮಗನಾದ ನರೇಂದ್ರ ನೆಕ್ಕಂಟಿ ಕಾರುಣ್ಯಾಶ್ರಮದ ಸಂಸ್ಥಾಪಕರುಗಳಾದ ಈರಮ್ಮ ಅಮರಯ್ಯ ಸ್ವಾಮಿ ಹಿರೇಮಠ ಹರೇಟನೂರು ಈ ದಂಪತಿಗಳ ಮಗನಾದ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು ಹಾಗೂ ವಿದ್ಯಾಶ್ರೀ ರೂಪ್ ಚಂದ್ ಜೈನ್ ಸಾ. ಬಳಗಾನೂರು ತಾ. ಮಸ್ಕಿ ಮತ್ತು ಜಯಲಕ್ಷ್ಮಿ ಶ್ರೀ ಲಕ್ಷ್ಮೀನಾರಾಯಣ ಸಾ. ಗಾಂಧಿನಗರ ತಾ. ಸಿಂಧನೂರು ಈ ದಂಪತಿಗಳ ಮಗನಾದ ವಿ. ನಾಗ ನಿಖಿಲ್ ಇವರುಗಳ ಜನ್ಮದಿನ ಸಮಾರಂಭ ಕಾರ್ಯಕ್ರಮ ಮತ್ತು ಲಿಂ.




ಅಮರಯ್ಯ ಸ್ವಾಮಿ ಹಿರೇಮಠ ಸಾ. ಐಕೂರು ತಾ. ವಡಗೇರಾ ಜಿ. ಯಾದಗಿರಿ ಹಾಗೂ ದಿ. ಶಂಕ್ರಮ್ಮ ಗುಂಡೂರು ಸಾ. ಮೆದಿಕಿನಾಳ ತಾ. ಮಸ್ಕಿ ಮತ್ತು ದಿ. ಸತ್ತಿರಾಜು ಸಾ. ಪಗಡದಿನ್ನಿ ಕ್ಯಾಂಪ್ ಹಾಗೂ ಆಶ್ರಮದ ದತ್ತಿಗಳಾದ ದಿ. ವುಂಡವಲ್ಲಿ ಸೀತಾರತ್ನಂ ಸಾ.ಬೂದಿವಾಳ ಕ್ಯಾಂಪ್ ಇವರುಗಳ ಪುಣ್ಯಾರಾಧನೆ ಸಮಾರಂಭ ಕಾರ್ಯಕ್ರಮಗಳು ಆಶ್ರಮದಲ್ಲಿ ಅನ್ನ ಸಂತರ್ಪಣೆ ಹಾಗೂ ಹಣ್ಣು ಹಂಪಲುಗಳನ್ನು ವಿತರಿಸುವ ಅರ್ಥಪೂರ್ಣವಾಗಿ ನೆರವೇರಿದವು. ಈ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಯದ್ದಲದೊಡ್ಡಿ ಸುವರ್ಣಗಿರಿ ವಿರಕ್ತಮಠದ ಪರಮ ಪೂಜ್ಯ ಶ್ರೀ ಮ. ನಿ. ಪ್ರ.ಮಹಾಲಿಂಗ ಮಹಾಸ್ವಾಮಿಗಳು ಕೋಳಬಾಳದ ಗಿರಡ್ಡಿ ಕುಟುಂಬದ ಕೀರ್ತಿ ಬಸವರಾಜ ದಂಪತಿಗಳಿಗೆ ಹಾಗೂ ಬನ್ನಿಗನೂರಿನ ಶೋಭಾ ಬಸವರಾಜ ಪಾಟೀಲ್ ದಂಪತಿಗಳಿಗೆ ಮತ್ತು ನಾಗರತ್ನ ಶಿವಮೂರ್ತೆಯ್ಯ ಸ್ವಾಮಿ ನಿವೃತ್ತ ಕೃಷಿ ಅಧಿಕಾರಿಗಳು ಸಿಂಧನೂರು ಇವರುಗಳಿಗೆ ಶ್ರೀಗಳು ಆಶೀರ್ವದಿಸಿದರು ನಂತರ ಮಹಾಲಿಂಗ ಮಹಾಸ್ವಾಮಿಗಳು ಕಾರುಣ್ಯ ಕುಟುಂಬವು ಬಸವಾದಿ ಶರಣರ ಆಶಯದಂತೆ ಸಮಾಜಕ್ಕೆ ಅರ್ಪಣೆಯಾಗಿದೆ.

ಈಗಿನ ತಂತ್ರಜ್ಞಾನದ ಜೊತೆ ಬದುಕುತ್ತಿರುವ ನಾವುಗಳಿಗೆ ಸಂಸ್ಕಾರದ ಕೊರತೆಯಾಗಿ ಇಂತಹ ವೃದ್ಧಾಶ್ರಮಗಳು ಹುಟ್ಟುಕೊಳ್ಳುತ್ತಿವೆ. ಈ ಕಾರುಣ್ಯ ಸಂಸ್ಥೆಯು ನಮ್ಮ ಒಳಬಳ್ಳಾರಿಯ ಲಿಂಗಕ್ಕೆ ಶ್ರೀ ಚನ್ನಬಸವ ಮಹಾಶಿವಯೋಗಿಗಳ ಆಶೀರ್ವಾದದೊಂದಿಗೆ ಸಮಾಜದಲ್ಲಿನ ಅನೇಕ ಲವಾರು ಅಂಧ-ಅನಾಥರ ಬಾಳಿಗೆ ಕರುಣೆಯ ಕುಟುಂಬವಾಗಿದೆ. ಬಸವಾದಿ ಶರಣರ ಆಶೀರ್ವಾದದೊಂದಿಗೆ ಕಾರುಣ್ಯಾಶ್ರಮದ ಸೇವೆಗಳು ನಡೆಯುತ್ತಿವೆ. ನಾಡಿನ ಸಾರ್ವಜನಕರು ತಮ್ಮ ಮನೆಯ ಯಾವುದೇ ಕಾರ್ಯಕ್ರಮಗಳನ್ನು ಇಂತಹ ಕಾರುಣ್ಯಾಶ್ರಮದಲ್ಲಿ ಅನ್ನದಾನ ಮಾಡುವುದರ ಮೂಲಕ ನೆರವೇರಿಸಿಕೊಂಡರೆ ಪುಣ್ಯಪ್ರಾಪ್ತಿಯಾಗುತ್ತದೆ.

ನಿಜವಾದ ಹಸಿದವರಿಗೆ ಅನ್ನದಾನ ಮಾಡಿದಾಗ ಮಾತ್ರ ಅನ್ನಸಂತರ್ಪಣೆಗೆ ಅರ್ಥ ಸಿಗುತ್ತದೆ ಎಂದು ಹಲವಾರು ಸಂದೇಶಗಳ ಮೂಲಕ ಆಶೀರ್ವಚನ ನೀಡಿದರು. ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನನ್ನೆಲ್ಲಾ ಸೇವಾಕಾರ್ಯಗಳಿಗೆ ಮಹಾಲಿಂಗ ಮಹಾಸ್ವಾಮಿಗಳ ಆಶೀರ್ವಾದವೇ ಸ್ಫೂರ್ತಿ. ನನ್ನ ಬಾಲ್ಯದಿಂದಲೂ ನನಗೆ ನನ್ನ ಹೃದಯ ಮಂದಿರದಲ್ಲಿ ಗುರುವಿನ ಸ್ಥಾನ ಕೊಟ್ಟಂತಹ ನನ್ನ ಈ ಗುರುವಿಗೆ ಮತ್ತು ನನ್ನ ಹೆತ್ತ ತಂದೆ ತಾಯಿಗಳಿಗೆ ನನ್ನ ಅಂತರಾಳದ ಮೂಲಕ ಅನಂತ ಕೋಟಿ ಕೋಟಿ ಪ್ರಣಾಮಗಳು. ಇಂತಹ ಹಸಿದ ಜೀವಿಗಳಿಗೆ ಅನ್ನದಾನ ಮಾಡುವಂತಹ ಇಂದಿನ ಈ ಕಾರ್ಯಕ್ರಮಗಳ ಎಲ್ಲಾ ಅನ್ನದಾತರಿಗೆ ಕರುಣೆಯ ಕಾರುಣ್ಯ ಕುಟುಂಬದ ವತಿಯಿಂದ ಹೃದಯಪೂರ್ವಕ ಹೃತ್ಪೂರ್ವಕ ಧನ್ಯವಾದಗಳು ಎಂದು ಮಾತನಾಡಿದರು.ಈ ಕಾರ್ಯಕ್ರಮದಲ್ಲಿ ಕೀರ್ತಿ ಗಿರೆಡ್ಡಿ ಮಾತನಾಡಿ ನಾನು ಅದೆಷ್ಟು ಆಶ್ರಮಗಳನ್ನು ನೋಡಿದ್ದೇನೆ ಆದರೆ ವಿಚಿತ್ರ ಸೇವೆಯನ್ನು ಕೈಗೆತ್ತಿಕೊಂಡು ಮಾನವ ಧರ್ಮದ ಮಾನವೀಯತೆ ಸುಂದರ ಮಂದಿರವಾಗಿದೆ ಈ ನಮ್ಮ ಕಾರುಣ್ಯ ಆಶ್ರಮ ಎಂದು ಪ್ರಾಸ್ತವಿಕವಾಗಿ ಮಾತನಾಡಿದರು.ಈ ಕಾರ್ಯಕ್ರಮದಲ್ಲಿ ದೇವಯ್ಯ ಸ್ವಾಮಿ ಇವರು ಸಾನಿಧ್ಯ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಸದಸ್ಯರು ಕಾರುಣ್ಯ ಆಶ್ರಮ.ನಾಗರತ್ನಮ್ಮ.

ಶಿವಮೂರ್ತೆಯ್ಯ ಸ್ವಾಮಿ ನಿವೃತ್ತ ಕೃಷಿ ಅಧಿಕಾರಿಗಳು ಸಿಂಧನೂರು. ಶೇಖರಯ್ಯ ಸ್ವಾಮಿ ಹಿರೇಮಠ ಐಕೂರು.ಶೋಭಾ ಬಸವರಾಜ ಪಾಟೀಲ್ ಬನ್ನಿಗನೂರು ಗಿರಿಜಮ್ಮ ಗಿರಡ್ಡಿ. ಶಂಕ್ರಪ್ಪ ಗಿರಡ್ಡಿ.ಬಸನಗೌಡ ಪಾಟೀಲ್ ಹಿರೇಕಡಬೂರು. ನಾಗಭೂಷಣ ನವಲಿ. ಬಸಣ್ಣ ಕಾಸರಡ್ಡಿ. ಪಂಪಾಪತಿ ಪಾಟೀಲ್. ಶರಣಪ್ಪ ಸಾಹುಕಾರ. ಹನುಮರಡ್ಡಿ ಕಾಸರಡ್ಡಿ. ಬಸವರಾಜ ಪಗಡದಿನ್ನಿ. ಶರಣೇಗೌಡ ಅಂಗಡಿ. ಶರಣಪ್ಪ ಬಪ್ಪುರು. ಮಲ್ಲಣ್ಣ ಹಳ್ಳಿ ಅಧ್ಯಕ್ಷರು ಮಸ್ಕಿ ಶ್ರೀ ಅನ್ನಪೂರ್ಣೇಶ್ವರಿ ಸೌಹಾರ್ದ ಸಹಕಾರಿ ಸಂಘ. ನಿ. ಮಸ್ಕಿ. ಬಸವರಾಜ ಸಾಹುಕಾರ. ಬಸವಶ್ರೀ ಕೋಚಿಂಗ್ ಸೆಂಟರ್. ಬಸವರಾಜ ಮೇಟಿ. ಭೀಮನಗೌಡ ನಂದಿಹಾಳ. ಅನಗವಾಡಿ ನಬಿ ಮ. ನದಾಫ್ ಕಾರ್ಯದರ್ಶಿಗಳು ಅಲ್ಪ ಸಂಖ್ಯಾತರ ಮೋರ್ಚಾ ಬಿಜೆಪಿ. ಯಮುನಪ್ಪ ನಿವೃತ್ತ ಬಿ.ಎಸ್.ಎನ್.ಎಲ್. ಅಧಿಕಾರಿಗಳು ಸಿಂಧನೂರು. ಹನುಮನ ಗೌಡ ಕುರುಕುಂದ. ವೀರಯ್ಯಸ್ವಾಮಿ ಮೂಲಿಮಠ. ಬಸವರಾಜ ಗೋನವಾರ. ಈರಣ್ಣ ಸಿಂಗಾಡಿ ಮತ್ತು ಆಶ್ರಮದ ಸಿಬ್ಬಂದಿಗಳಾದ ಡಾ. ಚನ್ನಬಸವ ಸ್ವಾಮಿ. ಮರಿಯಪ್ಪ.ಜ್ಯೋತಿ. ಹಾಗೂ ಕೋಳಬಾಳ ಮತ್ತು ಕುರುಕುಂದಾ ಗುರು ಹಿರಿಯರುಗಳು ಭಾಗವಹಿಸಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101